www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 8 ಸಂಚಿಕೆ - 12 ಡಿಸೆಂಬರ್ 2012
Volume : VIII Issue : XII December 2012

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಕೃಪೆಯ ಜೀವಿತ – ವಯಸ್ಕರ ಸ್ವರ
3. ದೇವರ ದಯೆ
4. ಪ್ರಶ್ನೋತ್ತರಗಳ ಸ್ವರ
5. ಸಾಕ್ಷಿಯ ಸ್ವರ
6. ಅನಾಥರ ಸ್ವರ
7. ಡಿಜಿಎಮ್ ಬೇತೆಲ್ ಅಂಕಣ
8. ಆರೋಗ್ಯ ಸ್ವರ
9. ಪ್ರಾರ್ಥನಾ ಸ್ವರ
10. ತಿಳುವಳಿಕೆಯ ಸ್ವರ
11. ಸ್ಥಳೀಯ ಮತ್ತು ವಿದೇಶ ಸುದ್ಧಿ
12. ಮಹಿಳೆಯರ ಸ್ವರ– ರೂತಳು

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯವಾಚಕರೆಲ್ಲರಿಗೂ ವಂದನೆಗಳು. ದಿನಗಳು ವೇಗವಾಗಿ ಓಡುತ್ತಾ ಇವೆ. ಕಳೆದ ಒಂದು ವರ್ಷ ಹೇಗೆ ಕಳೆಯಿತು ಎಂದು ನಮಗೆ ಗೊತ್ತಿಲ್ಲ. ಸತ್ಯವೇದದಲ್ಲಿ 366 ಕಡೆ ಭಯಪಡಬೇಡ ಎಂಬ ವಾಕ್ಯವು ಬರೆಯಲ್ಪಟ್ಟಿದೆ. ಕಳೆದ ವರ್ಷದ ಒಂದೊಂದು ದಿನ ಕೂಡ ನಮ್ಮೆಲ್ಲರ ಜೊತೆಯಲ್ಲಿದ್ದುಕೊಂಡು ಅದ್ಭುತವಾಗಿ ನಡೆಸಿದ್ದಾನೆ. **"ನಾವು ಉಳಿದಿರುವದು ಯೆಹೋವನ ಕರುಣೆಯೇ; ಆತನ ಕೃಪಾವರಗಳು ನಿಂತುಹೋಗವು. ದಿನದಿನವು ಹೊಸಹೊಸದಾಗಿ ಒದಗುತ್ತವೆ; ನಿನ್ನ ಸತ್ಯಸಂಧತೆಯು ದೊಡ್ಡದು"** (ಪ್ರಲಾ. 3:22–23). ಕಳೆದ ಒಂದೊಂದು ವರ್ಷ ಆತನ ಕೃಪೆಯನ್ನು ರುಚಿಸಿ ನೋಡಿದ್ದೇವು. ಕರ್ತನಾದ ಯೇಸುಕ್ರಿಸ್ತನು ಮದಲಿಂಗನಾಗಿ ಸಿದ್ಧವಾಗಿರುವ ಮದಲಗಿತ್ತಿ ಸಭೆಯನ್ನು ತನ್ನ ಜೊತೆ ಕರೆದುಕೊಂಡು ಹೋಗಲು ಬರುವ ಸಮಯ ಹತ್ತಿರವಾಯಿತು. ಎಫೆ. 5:27 **"ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು"** (ಎಫೆ. 5:27). ಆದಕಾರಣ ಎಲ್ಲಾ ಕ್ರೈಸ್ತ ವಿಶ್ವಾಸಿಗಳು, ಸಭೆಗಳು, ಆತ್ಮೀಕ ನಿದ್ರೆಯಿಂದ ಎಚ್ಚೆತ್ತುಕೊಂಡು ಸಿದ್ಧವಾಗುವ ಹಾಗೂ ಸಿದ್ಧಪಡಿಸುವ ಸಮಯ ಇದಾಗಿದೆ. **"ಆದದರಿಂದ ನಿದ್ರೆ ಮಾಡುವವನೇ, ಎಚ್ಚರವಾಗು; ಸತ್ತವರನ್ನು ಬಿಟ್ಟು ಏಳು! ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು ಎಂದು ಹೇಳಿಯದೆ"** (ಎಫೆ. 5:14). ನಮಗೆ ದೇವರು ಕೊಟ್ಟಿರುವ ಜವಾಬ್ದಾರಿಯನ್ನು ನಾವು ನಂಬಿಗಸ್ತರಾಗಿ ಮಾಡಬೇಕಾಗಿದೆ. **"ನಂಬಿಗಸ್ತನು ಆಶೀರ್ವಾದಪೂರ್ಣನಾಗುವನು; ಧನವಂತನಾಗಲು ಆತುರಪಡುವವನು ದಂಡನೆಯನ್ನು ಹೊಂದದಿರನು"** (ಜ್ಞಾನೋ. 28:20). ಹಳೆ ವರ್ಷವನ್ನು ಮುಗಿಸಿ ಹೊಸ ವರ್ಷವನ್ನು ಸಂಧಿಸಲು ಹೋಗುವ ತಮ್ಮೆಲ್ಲರನ್ನು ಕರ್ತನು ವಿಶೇಷವಾಗಿ ಆಶೀರ್ವಾದಮಾಡಲಿ. **"ಯೆಹೋವನು ಹೀಗೆನ್ನುತ್ತಾನೆ–ಹಳೇ ಸಂಗತಿಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಡಿರಿ, ಪುರಾತನಕಾರ್ಯಗಳನ್ನು ಮರೆತುಬಿಡಿ. ಇಗೋ, ಹೊಸ ಕಾರ್ಯವನ್ನು ಮಾಡುವೆನು, ಈಗ ತಲೆದೋರುತ್ತಲಿದೆ, ನಿಮಗೆ ಕಾಣುವದಿಲ್ಲವೋ? ನಾನು ಅರಣ್ಯದಲ್ಲಿ ಮಾರ್ಗವನ್ನು ಏರ್ಪಡಿಸಿ ಅಡವಿಯಲ್ಲಿ ನದಿಗಳನ್ನು ಹರಿಸುವೆನು"** (ಯೆಶಾ. 43:18–19). ನಮಗೆ ಸಂತೋಷತರುವ ವಿಷಯ ಏನೆಂದರೆ ಕಳೆದ ವರ್ಷ ದೇವರ ಸ್ವರ ಮಾಸ ಪತ್ರಿಕೆಯ ಮೂಲಕವಾಗಿ ಅನೇಕ ಜನರು ದೇವರ ಕಡೆಗೆ ತಿರುಗಿಕೊಂಡರು, ಅನೇಕರು ಆತ್ಮೀಕ ಜೀವಿತವನ್ನು ಪುನಸ್ಥಾಪಿಸಿಕೊಂಡರು, ಅನೇಕರು ಆತ್ಮೀಕ ಬೆಳವಣಿಗೆಯನ್ನು ಹೊಂದಿಕೊಂಡರು. ಇದೇ ರೀತಿ ತಾವೆಲ್ಲರೂ ದೇವರ ಸ್ವರ ಮಾಸ ಪತ್ರಿಕೆಯನ್ನು ಪ್ರೋತ್ಸಾಹಿಸಿ ಪ್ರಾರ್ಥನೆಯಲ್ಲಿ ಎತ್ತಿಹಿಡಿಯಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಕರ್ತನು ಚೀಯೋನಿನಿಂದ ಆಶೀರ್ವದಿಸಲಿ, ಆಮೆನ್.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಪ್ರಕಟಣೆ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

1 ತಿಮೊ. 4:1 ರಲ್ಲಿ ಕೊನೆಯ ದಿನಗಳಲ್ಲಿ ಜನರು ವಂಚಿಸುವ ಆತ್ಮಗಳಿಗೆ ಕಿವಿಗೊಟ್ಟು ಕ್ರಿಸ್ತನಂಬಿಕೆಯಲ್ಲಿ ಭ್ರಷ್ಟರಾಗುವರು ಎಂದು ಹೇಳುತ್ತದೆ, ಈ ಸುಳ್ಳು ಸೇವೆಗಳನ್ನು ನಾವು ಗುರುತಿಸಲು 1 ಕೊರಿ. 12:8–11ರಲ್ಲಿ ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರದ ಮೂಲಕವಾಗಿ ತಿಳಿದುಕೊಳ್ಳಲು ಸಾಧ್ಯ.

**ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರದ ಕಾರ್ಯಗಳು**

1. ಸುಳ್ಳು ಸೇವೆಗಳನ್ನು ಕಂಡು ಹಿಡಿಯುತ್ತದೆ.
2. ಸುಳ್ಳು ಸಭೆಗಳನ್ನು ಕಂಡು ಹಿಡಿಯಲು ಸಹಾಯ ಮಾಡುತ್ತದೆ (ಉದಾ. ಯೆಹೋವನ ಸಾಕ್ಷಿಗಳು, ಯೇಸು ನಾಮದವರು).
3. ಸುಳ್ಳಾದ ಉಪದೇಶಗಳನ್ನು ಕಂಡು ಹಿಡಿಯಲು ಸಹಾಯ ಮಾಡುತ್ತದೆ.
4. ತಪ್ಪಾದ ವ್ಯಕ್ತಿಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.
5. ಸೈತಾನನ ವಂಚನೆಗಳನ್ನು ಪ್ರಕಟಮಾಡುತ್ತದೆ.
6. ಸುಳ್ಳು ದರ್ಶನ, ಸುಳ್ಳು ಪ್ರವಾದನೆ, ಸುಳ್ಳು ಕನಸು ಇತ್ಯಾದಿಗಳನ್ನು ಪ್ರಕಟ ಮಾಡುತ್ತದೆ.
7. ವ್ಯಕ್ತಿಗಳಲ್ಲಿ ಯಾವ ಆತ್ಮ ಕ್ರಿಯೆ ಮಾಡುತ್ತಿದೆ ಎಂಬುದನ್ನು ತಿಳಿಸುತ್ತದೆ.

**ಸತ್ಯವೇದದಲ್ಲಿ ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರ :**

1) ಯೋಬ. 1:6, 2:9–10 ಯೋಬ.

2) 1 ಪೂರ್ವ. 21:1 ಯೋವಾಬ

3) 1 ಅರಸು. 22:19–23 ಮೀಕಾಯೆಹುವು

4) ಯೆರೆ. 37:14 ಯೆರೆಮೀಯ

5) ಯೋಹಾ. 1:48, ಮತ್ತಾ. 16:17–23 ಯೇಸುಕ್ರಿಸ್ತನು, (ಲೂಕ. 13:16, ಮಾರ್ಕ. 9:17–29).

6) ಅ.ಕೃ. 13:11, 16:16, 1 ತಿಮೊ. 4:1 ಅಪೋಸ್ತಲ ಪೌಲನು.

7) ಅ.ಕೃ. 5:1–9, 8:33 ಅಪೋಸ್ತಲ ಪೇತ್ರನು.

ಮತ್ತಾ. 7:20 ವ್ಯಕ್ತಿಗಳ ಫಲಗಳ ಮೂಲಕವಾಗಿ ಆತ್ಮೀಕನೋ, ಲೌಕಿಕನೋ ಎಂದು ತಿಳಿದುಕೊಳ್ಳಲು ಸಾಧ್ಯ. ಆದಿ ಅಪೊಸ್ತಲರ ಕಾಲದ ನಂತರವೂ ಅಪೋಸ್ತಲರಿದ್ದರು. 2 ಕೊರಿ. 12:12 ಈ ಅಪೊಸ್ತಲರ ಲಕ್ಷಣಗಳು – 2 ಕೊರಿ. 12:12.

**5) ನಿಕೋಲಾಯಿತರನ್ನು ದ್ವೇಷಿಸುತ್ತಿ :** ಇವರ ಕೃತ್ಯಗಳೇನು? ಅ.ಕೃ. 6:5 ರಲ್ಲಿ ನಿಕೋಲಾಯಸ್ ಅಂತಿಯೋಕ್ಯದ ಮಹಾವಲಂಬಿ 7 ಮಂದಿಗಳಲ್ಲಿ ಒಬ್ಬನು.

ನಿಕಾವೊ – ಅಧೀನಪಡಿಸು

ಲಾವೊಸ್ – ಜನರು ಜನರನ್ನು ಅಧೀನಪಡಿಸುವುದೇಂದು ಅರ್ಥ. ಪುರೋಹಿತ ವರ್ಗ ಇವರನ್ನು ಆದಿ ಸಭೆಯವರು ಎದುರಿಸಿ ನಿಂತರು.

**6) ದುಷ್ಟರನ್ನು ಸಹಿಸುತ್ತಿರಲಿಲ್ಲ :** ದುಷ್ಟರೆಂದರೆ ಯಾರು ? ದೇವರನ್ನು ಅಲಕ್ಷ್ಯಮಾಡುವವರು (ಕೀರ್ತ. 9:17).

**7) ಯೇಸುಕ್ರಿಸ್ತನ ಹೆಸರಿನ ನಿಮಿತ್ತ ಭಾದೆಪಡಲು ಬೇಸರಗೊಳ್ಳಲಿಲ್ಲ** (ಪ್ರಕ. 2:3). ಫಿಲಿ. 1:29 ಕ್ರಿಸ್ತನಲ್ಲಿ ನಂಬಿಕೆ ಇಡಲು ಮಾತ್ರವಲ್ಲ ಆತನಿಗಾಗಿ ಭಾದೆಪಡಲೂ ಕೂಡ ನಮ್ಮನ್ನು ಕರೆಯಲಾಗಿ ಅ.ಕೃ. 14:22 ಬಹು ಕಷ್ಟಗಳನ್ನು ತಾಳುವುದರ ಮೂಲಕ ದೇವರ ರಾಜ್ಯವನ್ನು ಪ್ರವೇಶ ಮಾಡಬೇಕು. **"ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವುದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು"** (2 ತಿಮೊ. 3:12).

ಆಕ್ಷೇಪಣೆ : ಕೆಲವು ನ್ಯೂನತೆಗಳನ್ನು ಪವಿತ್ರಾತ್ಮನು ಎತ್ತಿ ತೋರಿಸುತ್ತಿದ್ದಾನೆ :

1. ಅನೇಕ ವಿಷಗಳು ಒಳ ಸೇರುವುದರಿಂದ ಸ್ವಲ್ಪ ಮಾತ್ರ ತಪ್ಪು ಇದೆ ಎನ್ನುವುದರಿಂದ ಪವಿತ್ರಾತ್ಮನು ಬಿಡುವುದಿಲ್ಲ, ದೇವರ ಇಷ್ಟ ನಮ್ಮ ಶುದ್ಧೀಕರಣವಾಗಿದೆ (ರೋಮ. 15:4, 2 ಕೊರಿ. 10:11).

ನೀನು ಎದ್ದು ಚೀಯೋನನ್ನು ಕರುಣಿಸುವಿ. ಅದಕ್ಕೆ ಕೃಪೆತೋರಿಸುವ ಸಮಯ ಇದೇ;
ನಿಯಮಿತ ಕಾಲವು ಬಂದದೆ (ಕೀರ್ತ. 102:13).

2. ಈ ಸಭೆ ಹೃದಯ ರೋಗಿಯಾಗಿತ್ತು :– ಅನೇಕ ವಿಧವಾಗಿ ಕಷ್ಟಪಟ್ಟು ಸುವಾರ್ತ ಸೇವೆ ಮಾಡಿದರೂ ನಿಜವಾದ ಪ್ರೀತಿ ಇರಲಿಲ್ಲ.

3. ಕರ್ತನಿಗಾಗಿ ಸೇವೆ ಮಾಡುವವರು ಕರ್ತನಿಗೆಂದು ಸೇವೆಮಾಡಬೇಕು. ಏನು ಮಾಡುತ್ತಿದ್ದೇವೆ ಎಂಬುದಕ್ಕಿಂತ ಏತಕ್ಕಾಗಿ ಮಾಡುತ್ತಿದ್ದೇವೆ ಎಂದು ಆಲೋಚಿಸಬೇಕು.

**1)ಮೊದಲ ಪ್ರೀತಿ :** ಅನೇಕರು ರಕ್ಷಣೆ ಹೊಂದಿದ ಆರಂಭದಲ್ಲಿ ತುಂಬಾ ಉತ್ಸುಕರಾಗಿರುತ್ತಾರೆ. ಯಾವಾಗಲೂ ಪ್ರಾರ್ಥನೆ, ಆರಾಧನೆ, ಕೂಟಗಳು, ಉಪವಾಸ ಮಾತ್ರವಲ್ಲದೆ ಸುವಾರ್ತೆ ಸಾರುವುದರಲ್ಲೂ ಉತ್ಸುಕರಾಗಿರುತ್ತಾರೆ. ಕಾಲ ಕ್ರಮೇಣ ಕರ್ತನ ವಿಶೇಷ ಆಶೀರ್ವಾದ ಹೊಂದಿದ ನಂತರ ಎಲ್ಲಾ ಸಮಸ್ಯೆಗಳಿಂದ ಬಿಡುಗಡೆ ಹೊಂದಿದ ನಂತರ ಕರ್ತನನ್ನೇ ಮರೆತು ಬಿಡುತ್ತಾರೆ. ಮತ್ತೆ ಸುವಾರ್ತೆ ಸಾರಲು ಆಸಕ್ತಿ ಇಲ್ಲ, ಪ್ರಾರ್ಥಿಸಲು, ಆರಾಧಿಸಲು ಆಸಕ್ತಿ ಇಲ್ಲ. ಸಭೆಗೆ ಬಂದರೆ ಬಂದರು ಇಲ್ಲದಿದ್ದರೆ ಇಲ್ಲ ಮೊದಲ ಪ್ರೀತಿಯಲ್ಲಿ ಬಿದ್ದು ಹೋಗುತ್ತಾರೆ. 2 ಪೂರ್ವ. 12: 1–8 ರಲ್ಲಿ ಉತ್ತಮವಾದ ಉದಾಹರಣೆ ಸೌಲನ ಮಗನಾದ ರೆಹಬ್ಬಾಮ ಹಾಗೂ ಇಸ್ರಾಯೇಲ್ಯರು ದೇವರಿಂದ ಆಶೀರ್ವಾದ ಹೊಂದಿದ ನಂತರ ದೇವರನ್ನು ಹಾಗೂ ದೇವರ ಧರ್ಮೋಪದೇಶವನ್ನು ಮರೆತು ಹೋಗುವಂತದ್ದನ್ನು ಕಾಣಬಹುದು. ರೆಹಬ್ಬಾಮನು ತನ್ನ ರಾಜ್ಯಾಧಿಕಾರವನ್ನು ಸ್ಥಿರಪಡಿಸಿಕೊಂಡು ಬಲಗೊಂಡ ಮೇಲೆ ಅದನ್ನು ಅವನ ಪ್ರಜೆಗಳಾದ ಎಲ್ಲಾ ಇಸ್ರಾಯೇಲ್ಯರೂ ಯೆಹೋವನ ಧರ್ಮೋಪದೇಶವನ್ನು ಬಿಟ್ಟು ಬಿಟ್ಟರು. ಅವರು ಯೆಹೋವನಿಗೆ ದ್ರೋಹಿಗಳಾದರಿಂದ ಅರಸನಾದ ರೆಹಬ್ಬಾಮನ ಆಳಿಕೆಯ ಐದನೆಯ ವರುಷದಲ್ಲಿ ಐಗುಪ್ತದ ಅರಸನಾದ ಶೀಶಕನು ಸಾವಿರದ ಇನ್ನೂರು ರಥಗಳನ್ನು ಅರುವತ್ತು ಸಾವಿರ ಮಂದಿ ರಾಹುತರನ್ನು ಐಗುಪ್ತದ ಅಸಂಖ್ಯರಾದ ಲೂಬ್ಯ, ಸುಕ್ಕೀಯ, ಕೂಷ್ಯ ಸೈನಿಕರನ್ನು ಕೂಡಿಸಿಕೊಂಡು ಯೆರುಸಲೇಮಿಗೆ ವಿರೋಧವಾಗಿ ಹೊರಟು ಯೆಹೂದ ದೇಶದ ಕೋಟೆಕೊತ್ತಲುಗಳುಳ್ಳ ಪಟ್ಟಣಗಳನ್ನು ಸ್ವಾಧೀನಮಾಡಿಕೊಂಡ ನಂತರ ಯೆರುಸಲೇಮನ್ನು ಪ್ರವೇಶಿಸಿದನು. ಆಗ ಪ್ರವಾದಿಯಾದ ಶಿಮಾಯನು ರೆಹಬ್ಬಾಮನ ಬಳಿಗೂ ಶೀಶಕನಿಗೆ ಹೆದರಿ ಯೆರುಸಲೇಮಿನಲ್ಲಿ ಕೂಡಿದ್ದ ಯೆಹೂದ್ಯ ಪ್ರಧಾನರ ಬಳಿಗೂ ಬಂದು ಅವರಿಗೆ ನೀವು ನನ್ನನ್ನು ಬಿಟ್ಟಿದ್ದರಿಂದ ನಾನು ನಿಮ್ಮನ್ನು ಶೀಶಕನ ಕೈಯಲ್ಲಿ ಬಿಟ್ಟು ಬಿಟ್ಟಿದ್ದೇನೆಂಬುದಾಗಿ ಯೆಹೋವನು ಅನ್ನುತ್ತಾನೆ ಎಂದು ಹೇಳಿದನು. ಆಗ ಅರಸನು ಇಸ್ರಾಯೇಲ್ ಪ್ರಧಾನರೂ ಯೆಹೋವನು ನ್ಯಾಯವಂತನೆಂದು ಒಪ್ಪಿ ತಮ್ಮನ್ನು ತಗ್ಗಿಸಿಕೊಂಡರು. ಯೆಹೋವನು ಇದನ್ನು ನೋಡಿ ಶೆಮಾಯನಿಗೆ ಇವರು ತಮ್ಮನ್ನು ತಗ್ಗಿಸಿಕೊಂಡದ್ದರಿಂದ ಇವರನ್ನು ಸಂಹರಿಸುವುದಿಲ್ಲ ಸ್ವಲ್ಪ ಕಾಲದಲ್ಲಿಯೇ ಇವರಿಗೆ ರಕ್ಷಣೆಯನ್ನು ಅನುಗ್ರಹಿಸುವೆನು. ಶೀಶಕನ ಮುಖಾಂತರವಾಗಿ ನನ್ನ ರೌದ್ರವನ್ನು ಯೆರೂಸಲೇಮಿನ ಮೇಲೆ ಸುರಿದು ಬಿಡುವುದಿಲ್ಲ. ಮೇಲಿನ ವಾಕ್ಯಗಳ ಮೂಲಕವಾಗಿ ಒಂದು ದೊಡ್ಡ ಸತ್ಯವನ್ನು ನಾವು ತಿಳಿದುಕೊಳ್ಳಬಹುದು. ರೆಹಬ್ಬಾಮ ಮತ್ತು ಇಸ್ರಾಯೇಲ ಜನರು ಕಷ್ಟ ದು:ಖ ಸಮಸ್ಯೆಗಳಿರುವಾಗ ದೇವರನ್ನು ಆತುಕೊಂಡರು. ಯಾವಾಗ ದೇವರು ಅವರನ್ನು ಕೃಪೆಯಿಂದ ಅಭಿವೃದ್ಧಿಪಡಿಸಿದನೋ ಅದರ ನಂತರವೇ ದೇವರನ್ನು ಹಾಗೂ ದೇವರ ಧರ್ಮೋಪದೇಶವನ್ನು ಮರೆತರು. ನನಗೆ ಸತ್ಯವೇದದಲ್ಲಿ ತುಂಬಾ ಪ್ರಿಯ ವ್ಯಕ್ತಿ ದಾವೀದ ಆತನು ದೇವರು ತನ್ನನ್ನು ಯಾವ ಸ್ಥಿತಿಯಿಂದ ಎತ್ತಿದ್ದನು ಎಂದು ಅರಿತು ಕೊನೆಯವರೆಗೂ ದೇವರನ್ನು ಸ್ತುತಿಸುತ್ತಿದ್ದನು ಮಾತ್ರವಲ್ಲ ಆತನ ಕೊನೆಯ ಪ್ರೀತಿಯು ಮೊದಲ ಪ್ರೀತಿಗಿಂತಲೂ ಅತ್ಯುತ್ತಮವಾಗಿದ್ದೀತು. ಇಂದು ನಮ್ಮನ್ನು ನಾವೇ ಪರೀಕ್ಷಿಸೋಣ. ಮೊದಲ ಪ್ರೀತಿಯಲ್ಲಿ ಇದ್ದೇವೊ, ಇಲ್ಲವೋ ಎಂದು?. ನ್ಯಾಯ. 16:19–21 ಯೆಹೋವನು ತನ್ನನ್ನು ಬಿಟ್ಟು ಹೋದದ್ದು ಸಂಸೋನನಿಗೆ ತಿಳಿಯಲೇ ಇಲ್ಲ. **"ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂಬುದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವುದಿಲ್ಲವೋ? ಆತನು ನಿಮ್ಮಲ್ಲಿಲ್ಲದಿದ್ದರೆ ನೀವು ಅಯೋಗ್ಯರೇ"** (2 ಕೊರಿ. 13:5).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ; ಆತನು ಸಮಸ್ತವನ್ನೂ ಆಳುತ್ತಾನೆ (ಕೀರ್ತ. 103:19).

# ಕೃಪೆಯ ಜೀವಿತ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅರಸನಾದ ನೆಬೂಕದ್ನೆಚ್ಚರನು ಬಾಬೆಲ್ ಪಟ್ಟಣದ ಕುರಿತಾಗಿ **"ನನ್ನ ಸಾಮರ್ಥ್ಯ ಬಲದಿಂದಲೇ ಎಂದು ಕೊಚ್ಚಿಕೊಂಡಾಗ ದೇವರು ಅಹಂಕಾರಿಯಾದ ಆತನನ್ನು 7 ವರ್ಷಗಳ ತನಕ ಅರಸತನ ಬಿಟ್ಟು ಕಾಡಿಗೆ ತಳ್ಳಿ ಕಾಡು ಮೃಗಗಳೊಂದಿಗೆ ವಾಸಿಸಿ, ದನಗಳಂತೆ ಹುಲ್ಲು ಮೇಯುವ ಗತಿಯನ್ನು ವಿಧಿಸಿದನು. ಆ ನಂತರ 7 ವರ್ಷ ಕಳೆದು ಬುದ್ಧಿ ಸ್ವಾಧೀನಕ್ಕೆ ಬಂದು ಪರಲೋಕ ದೇವರನ್ನು ಮಹಿಮೆಪಡಿಸುವುದನ್ನು ನಾವು ಸತ್ಯವೇದದಲ್ಲಿ ಓದಬಹುದು.** (ದಾನಿ. **4:28–37**). **"ಆತನ ಕಾರ್ಯಗಳೆಲ್ಲಾ ಸತ್ಯ, ಆತನ ಮಾರ್ಗಗಳೆಲ್ಲಾ ನ್ಯಾಯ, ಸೊಕ್ಕಿನಿಂದ ನಡೆಯುವವರನ್ನು ತಗ್ಗಿಸಬಲ್ಲನು"** (ದಾನಿ. 4:37). ಆದಾಮ ಹವ್ವರು ದೇವರಂತಾಗ ಬಯಸಿದ್ದರಿಂದ ಪಾಪದಲ್ಲಿ ಬಿದ್ದು ದೇವರಿಂದ ದೂರಾದರು. ಒಬ್ಬರಿಗೊಬ್ಬರಿಗೆ ದೇವರು ಅವರಿಗೆ ಆದ ಕೃಪೆಯನ್ನು ಕೊಟ್ಟಿದ್ದಾನೆ. ಆದರಿಂದ ನಾವು ಹೆಚ್ಚಿಸಿಕೊಳ್ಳುವುದರಿಂದ ಯಾವ ಪ್ರಯೋಜನವೂ ಇಲ್ಲ. **"ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು"** (ರೋಮ. 12:3). ಧನ ಮಾನ ಜೀವಗಳು ದೀನಭಾವಕ್ಕೂ, ಯೆಹೋವನ ಭಯಕ್ಕೂ ಫಲ" (2 ಕೊರಿ. 10:18). ಕರ್ತನಾದ ಯೇಸು ಶಿಲುಬೆಯ ಮರಣ ಹೊಂದುವಷ್ಟು ದೀನನಾಗಿ ನಮಗಾಗಿ ಎಲ್ಲವನ್ನು ಸಹಿಸಿಕೊಂಡನು. ಪ್ರಿಯ ದೇವಮಗುವೆ ನಾವು ಮೊದಲಾಗಿ ದೇವರಿಗೆ ಅಧೀನರಾಗಬೇಕಾಗಿದೆ. (ಅ.ಕೃ. 5:29). ದೀನರಾದ ನಮ್ಮನ್ನು ಆತನು ತಿರಸ್ಕರಿಸುವುದಿಲ್ಲ (ಜ್ಞಾನೋ. 3:34). ಸಭೆಯು ಕ್ರಿಸ್ತನಿಗೆ ಅಧೀನರಾಗಬೇಕಾಗಿದೆ (ಎಫೆ. 5:24). ವಿಶ್ವಾಸಿಯೇ ನೀನು ಎಷ್ಟು ವರ್ಷದ ವಿಶ್ವಾಸಿಯೆ ಆಗಿದ್ದರೂ ನಿನ್ನ ಸಭೆಯಲ್ಲಿ ನಿನ್ನ ಸಭಾ ನಾಯಕರಿಗೆ ಅಧೀನರಾಗಬೇಕಾಗಿದೆ (ಇಬ್ರಿ. 13:17). ಕುಟುಂಬವಾಗಿ ಜೀವಿಸುವ ಸ್ತ್ರೀಯೆ ನೀನೂ ಕೂಡ ನಿನ್ನ ಗಂಡನಿಗಿಂತ ವಿದ್ಯಾವಂತಗಳಾಗಿದ್ದರೂ, ಆತನಿಗಿಂತ ಹೆಚ್ಚು ಸಂಬಳ ತರುವವಳಾಗಿ ಇರುವಾಗಲೂ ನಿನ್ನ ಗಂಡನಿಗೆ ಅಧೀನರಾಗಿರಬೇಕೆಂದು ಸತ್ಯವೇದ ತಿಳಿಸುತ್ತದೆ (ಎಫೆ. 5:22). ಅದೇ ರೀತಿ ಮಕ್ಕಳು ತಂದೆ ತಾಯಿಗೆ ಅಧೀನರಾಗಿ ನಡೆದುಕೊಳ್ಳಬೇಕಾಗಿದೆ (ಎಫೆ. 6:1). ಯೇಸುವೂ ಕೂಡಾ ಈ ಲೋಕದಲ್ಲಿರುವ ತನ್ನ ತಂದೆ ತಾಯಿಗಳಿಗೆ ಅಧೀನರಾಗಿ ಜೀವಿಸಿದನು (ಲೂಕ. 2:51). ಈ ರೀತಿ ನಾವು ಯಾರಿಗೆ ನಾವು ಅಧೀನರಾಗಿ ಜೀವಿಸಬೇಕೋ ಅವರಿಗೆ ಅಧೀನರಾಗಿರುವಾಗ ದೇವರು ನನ್ನನ್ನು ಆಶೀರ್ವದಿಸುತ್ತಾನೆ. **"ದೀನರನ್ನು ಲಕ್ಷಿಸುತ್ತಾನೆ. ಗರ್ವಿಷ್ಟರನ್ನು ದೂರದಿಂದಲೇ ಗುರುತು ಹಿಡಿಯುತ್ತಾನೆ"** (ಕೀರ್ತ. 138:6).

ವಯಸ್ಕರ ಸ್ವರ

2) ಭರವಸೆಯಿಟ್ಟವರಿಗೆ ದೇವರು ಕೃಪೆ ತೋರಿಸುವನು (ಕೀರ್ತ. 32:10).

ಇಂದು ಅನೇಕರು ಅನೇಕ ವ್ಯಕ್ತಿಗಳ ಮೇಲೆ ಭರವಸೆಯನ್ನು ಇಟ್ಟು ದೇವರ ಮೇಲೆ ಭರವಸೆಯನ್ನು ಕಳೆದುಕೊಳ್ಳುತ್ತಾನೆ. **"ಮಾನವ ಮಾತ್ರದವರಲ್ಲಿ ಭರವಸೆಯಿಟ್ಟು ನರಜನ್ಮದವರನ್ನು ತನ್ನ ಭುಜ ಬಲವೆಂದು ತಿಳಿದು ಯೆಹೋವನನ್ನು ತೊರೆಯುವ ಮನಸ್ಸುಳ್ಳವನು ಶಾಪಗ್ರಸ್ತನು"** (ಯೆರೆ. 17:5). ದೇವರಲ್ಲಿ ಭರವಸೆಯಿಡುವುದು ನಮಗದು ಉದ್ಧಾರತರುವುದು" (ಜ್ಞಾನೋ. 29:25). "ಮನುಷ್ಯರಲ್ಲಿ ಭರವಸೆವಿಡುವುದಕ್ಕಿಂತ ಯೆಹೋವನನ್ನು ಆಶ್ರಯಿಸುವುದು ಒಳ್ಳೇಯದು ಪ್ರಭುಗಳಲ್ಲಿ ಭರವಸೆಯಿಡುವುದಕ್ಕಿಂತ ಯೆಹೋವನನ್ನು ಆಶ್ರಯಿಸುವುದು ಒಳ್ಳೇಯದು (ಕೀರ್ತ. 118:8–9). ರೂಬೇನ್ಯರು, ಗಾದ್ಯರು ಮನಸ್ಸೆಕುಲದ ಅರ್ಧ ಜನರು ಎಲ್ಲಾ ಜನರೂ ಸೇರಿ ಹಗ್ರಿಯರೊಡನೆ, ಯೆಟೂರು, ನಾಫೀಬ್, ನೋದಾಬ್ ಇವರೊಡನೆ ಯುದ್ಧ ಮಾಡುವಾಗ ಅವರು ದೇವರ ಮೇಲೆ ಭರವಸೆಯಿಟ್ಟದ್ದರಿಂದ ದೇವರು ಅವರಿಗೆ ಕಿವಿಗೊಟ್ಟು ಯುದ್ಧದಲ್ಲಿ ಜಯವನ್ನು ಅನುಗ್ರಹಿಸಿದನು (1 ಪೂರ್ವ. 5:18–20). ಯೆಹೂದದ ಅರಸನಾದ ಯೆಹೋಷಾಫಟನಿಗೆ ಹಾಗೂ ಯೆಹೂದ್ಯರಿಗೆ ವಿರುದ್ಧವಾಗಿ ಮೋವಾಬ್ಯರೂ, ಅಮ್ಮೋನಿಯರೂ, ಮೆಗೂನ್ಯರಲ್ಲಿ ಕೆಲವರು ದೊಡ್ಡ ಸಮೂಹವಾಗಿ ಯುದ್ಧಕ್ಕೆ ಬರಲು ಯೆಹೋಷಾಫಾಟನು ಹೆದರಿ ದೇವರನ್ನೇ ಆಶ್ರಯಿಸಿದನು. ಯೆಹೂದ್ಯರ ಕುರಿತಾಗಿ ಆತನು **"ಯೆಹೂದ್ಯರೆ ಯೆಹೋವನಲ್ಲಿ ಭರವಸೆಯಿಡಿರಿ, ಸುರಕ್ಷಿತರಾಗುವಿರಿ"**. (1 ಪೂರ್ವ. 20:20). ಆತನು ದೇವರನ್ನು ಗಾಯನ ಮಾಡುವುದಕ್ಕಾಗಿ ಕೆಲವರನ್ನು ಆರಿಸಿ ದೇವರನ್ನು ಆರಾಧಿಸುತ್ತಾ ಕೀರ್ತಿಸುತ್ತಾ ಇರುವಲ್ಲಿ ಎದುರಾಗಿ ಬಂದಿರುವ ಶತ್ರುಪಡೆಯವರು ಮೊದಲು

ಯೆಹೋವನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ಯುಗಯುಗಾಂತರಗಳವರೆಗೂ ಇರುತ್ತದೆ (ಕೀರ್ತ. 103: 17).

ಒಬ್ಬರಿಗೊಬ್ಬರು ಹೊಡೆದಾಡಿಯೂ ಕೊಲ್ಲುತ್ತಾ ಆ ನಂತರ ತಾನೇ ಒಬ್ಬರನ್ನೊಬ್ಬರು ಕೊಲ್ಲುತ್ತಾ ನಾಶವಾಗುತ್ತಾ ಹೋದರು. ಕಾರಣ ಯೆಹೂದ್ಯರು ದೇವರಾದ ಯೆಹೋವನ ಮೇಲೆ ಭರವಸೆಯಿಟ್ಟದ್ದರಿಂದ ದೇವರು ಅವರಿಗೆ ಶತ್ರುಗಳ ಮೇಲೆ ಜಯಕೊಟ್ಟನು" ಹೌದು ಪ್ರಿಯ ದೇವ ಮಗುವೆ ದೇವರ ಮೇಲೆ ಭರವಸೆಯಿಟ್ಟವರಿಗೆ ತನ್ನ ಕೃಪೆಯನ್ನು ಸಲ್ಲಿಸುತ್ತಾನೆ.

3) ಮುಂಜಾನೆಯಲ್ಲಿ ಕರ್ತನನ್ನು ಹುಡುಕುವವರಿಗೆ ಕೃಪೆ (ಕೀರ್ತ. 90:14). ದೇವ ಮನುಷ್ಯನಾದ ಮೋಶೆಯು ಹೀಗೆಂದು ಪ್ರಾರ್ಥಿಸುತ್ತಾನೆ. ಉದಯದಲ್ಲಿ ನಿನ್ನ ಕೃಪೆಯಿಂದ ನಮ್ಮನ್ನು ಸಂತೃಪ್ತಿಪಡಿಸು; ಆಗ ಜೀವಮಾನದಲ್ಲೆಲ್ಲಾ ಉಲ್ಲಾಸಿಸಿ ಹರ್ಷಿಸುವೆವು. ಅಂದು ಐಗುಪ್ತ್ಯದಿಂದ ಪಾರಾಗಿ ಬಂದ ಇಸ್ರಾಯೇಲ್ಯರು ಮುಂಜಾನೆ ಎದ್ದು ಪರಲೋಕದ ದೇವದೂತರ ಆಹಾರವಾದ ಮನ್ನವನ್ನೇ ಸಂಗ್ರಹಿಸುತ್ತಿದ್ದರು. ಆದರೆ ಅದೇ ಮನ್ನ ಬಿಸಿಲು ಬಿದ್ದು ಬಿಸಿಲು ಬಂದ ನಂತರ ಕರಗಿ ಹೋಗುತ್ತಿತ್ತು. ಪ್ರಿಯ ದೇವ ಮಗುವೇ ನೀನು ಸೊಂಬೇರಿಯಾಗದೆ ಅನುದಿನದ ದೇವರ ಕೃಪೆಗಾಗಿ ಮುಂಜಾನೆಯಲ್ಲಿ ದೇವರ ಸನ್ನಿಧಿಯಲ್ಲಿ ಕಾದುಕೋ. ನಿನ್ನ ಕುಟುಂಬದಲ್ಲಿ ಮುಂಜಾನೆಯಲ್ಲಿ ಕರ್ತನಿಗೆ ಹಾಡಿ ಆರಾಧಿಸುವ ಸ್ತುತಿ ಸ್ತೋತ್ರ ಕೇಳ ಬರಲು ಹೊಸ ಕೃಪೆಯನ್ನು ಕರ್ತನು ಸುರಿಸುವನಾಗಿದ್ದಾನೆ. "ನಾನಾದರೋ ಯೆಹೋವನೇ ನಿನಗೆ ಮೊರೆಯಿಡುತ್ತೇನೆ. ಉದಯದಲ್ಲಿ ನನ್ನ ವಿಜ್ಞಾಪನೆಯು ನಿನ್ನ ಮುಂದೆ ಬರುವುದು (ಕೀರ್ತ. 88:13).

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**ಪಾ|| ರೋನಾಲ್ಡ್ ಮಚಾದೋ**
**ಬೇತೇಲ್ ಚರ್ಚ್.**

---


## ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ಹಾಗೂ ನಿಮ್ಮ ಮಕ್ಕಳ ಹುಟ್ಟಿದ ದಿನವನ್ನು ನಮ್ಮ ಅನಾಥಶ್ರಮದ ನಿವಾಸಿಗಳೊಂದಿಗೆ ಆಚರಿಸುವೀರಾ?

**ಹಾಗಾದರೆ ನಿಮಗೆ ಸ್ವಾಗತ**

* ನಿಮ್ಮ ಹುಟ್ಟಿದ ದಿನ.
* ನಿಮ್ಮ ಮಕ್ಕಳ ಹುಟ್ಟಿದ ದಿನ.
* ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನ.
* ನಿಮ್ಮ ಮದುವೆ ದಿನ.

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ : 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

* * * * *

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

* ಪ್ರಾರ್ಥನೆ * ಆರ್ಥಿಕ ಸಹಾಯ

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

**ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.**


ಯೆಹೋವನು ತನ್ನಲ್ಲಿ ಭಯಭಕ್ತಿಯುಳ್ಳವರನ್ನು ಕನಿಕರಿಸುತ್ತಾನೆ. ಆತನು ನಮ್ಮ ಪ್ರಕೃತಿಯನ್ನು ಬಲ್ಲನು (ಕೀರ್ತ. 103:13).

# ದೇವರ ದಯೆ

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**ಭೂಮಿಯಲ್ಲಿ ಸಮೃದ್ಧಿಯಾಗಿ ಬೆಳೆಯುವ ಫಲ ಇವೆಲ್ಲವೂಗಳು ಶ್ರೇಷ್ಠವಾದದ್ದು. (ಹೋರೇಬ್ ಬೆಟ್ಟದಲ್ಲಿನ) ಮುಳ್ಳುಗಿಡದಲ್ಲಿ ವಾಸಿಸಿದಾತನ ದಯೆಯೂ ಯೋಸೇಫ್ ವಂಶದವರ ಪಾಲಿಗೆ ಬರಲಿ; ಅಣ್ಣ ತಮ್ಮಂದಿರಿಗೆ ಪ್ರಭುವಾಗಿರುವ ಕುಲದವರ ಶಿರಸ್ಸಿನ ಮೇಲೆ ಉಂಟಾಗಲಿ** (ಧರ್ಮೋ. 33:16).

ಕರ್ತನಲ್ಲಿ ಪ್ರಿಯರೇ, ಧ.ಕಾ 33ನೇ ಅಧ್ಯಾಯವನ್ನು ಧ್ಯಾನಿಸುವಾಗ ದೇವ ಪುರುಷನಾದ ಮೋಶೆಯು ದೇಹವನ್ನು ಬಿಡುವುದಕ್ಕಿಂತ ಮುಂಚೆ ಇಸ್ರಾಯೇಲ್ಯರ ಹನ್ನೆರಡು ಕುಲಗಳ ವಿಷಯದಲ್ಲಿ ಹೇಳಿದ ಆಶೀರ್ವಾದಗಳನ್ನು ಕಾಣಬಹುದು. ಇಲ್ಲಿ ಮೋಶೆಯು ಒಂದೊಂದು ಕುಲಗಳಿಗೆ ತಾನು ದೇವರಿಂದ ಹೊಂದಿಕೊಂಡ ವ್ಯಕ್ತವಾದ ಆಲೋಚನೆಗಳನ್ನು ತಿಳಿಸುತ್ತಿರುವಾಗ ಆಮೆನ್. ಯೋಸೇಫ್ ಕುಲಗಳಿಗೆ ಬಂದಾಗ ಮೋಶೆಯು ತನ್ನ 80ನೇ ವಯಸ್ಸಿನಲ್ಲಿ ಹೋರೇಬ್‌ಬೆಟ್ಟದಲ್ಲಿ ಕಂಡ ಮುಳ್ಳುಗಿಡದಲ್ಲಿನ ಅಗ್ನಿಯನ್ನು, ದೇವರ ಪ್ರಸನ್ನತೆಯನ್ನು, ಅಭಿಷೇಕವನ್ನು, ನೆನಪಿಸಿಕೊಂಡು ಯಾವ ರೀತಿ ಮುಳ್ಳುಗಳ ಮಧ್ಯೆ ಬೆಳೆದ ಯೋಸೇಫನಿಗೆ ದೇವರ ದಯೆ ದೊರಕಿತು ಅದೇ ಪ್ರಕಾರ ಯೋಸೇಫ ವಂಶದವರ ಪಾಲಿಗೆ ಬರಲಿ ಎಂದು ಆಶೀರ್ವದಿಸಿದನು.

ಯೋಸೇಫನನ್ನು ಗಮನಿಸುವಾಗ ಮುಳ್ಳುಗಳು ಒಂದಕ್ಕೊಂದು ಬಿಡಿಸಲಾಗದ ಬಳ್ಳಿಯೋಪಾದಿಯಲ್ಲಿ ಅಂಟಿಕೊಂಡು ಸುತ್ತಲು ಸುತ್ತುವರಿದಿರುವಾಗ ಅವುಗಳ ಮಧ್ಯದಲ್ಲಿ ಬೆಳೆದ ಮುಳ್ಳುಗಿಡದ ಮೇಲೆಯೇ ಅರಳಿದ ಸುವಾಸನೆಯ ಗುಲಾಬಿಯಾಗಿದ್ದನು. ನಿಂದೆ, ತಿರಸ್ಕಾರ, ಸಂಕಟ, ಪರಿಹಾಸ್ಯ, ಕಷ್ಟ, ಗುಲಾಮತನ, ಅವಮಾನ, ಸೆರೆವಾಸ ಈ ಎಲ್ಲಾ ಮುಳ್ಳುಗಳಿಂದ ಬಾಧಿಸಲ್ಪಟ್ಟರೂ ಅವುಗಳ ಮಧ್ಯದಲ್ಲಿ ದೇವರ ಅಪರಿಮಿತವಾದ ಪ್ರೀತಿಯಿಂದ ತುಂಬಲ್ಪಟ್ಟನು ಮತ್ತು ದೇವರ ತಂಪಾದ ಹಸ್ತವನ್ನು ಅನುಭವಿಸಿದನು. ಮುಳ್ಳುಗಳು ಎಂದಿಗೂ ಗುಲಾಬಿಯನ್ನು ನಷ್ಟಪಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಕಾರಣ ಪರಲೋಕದ ಸಂರಕ್ಷಣೆ ಅದಕ್ಕಿತ್ತು. ಯಾವಾಗೆಲ್ಲ ಮುಳ್ಳುಗಳು ಚುಚ್ಚಲು ಪ್ರಾರಂಭಿಸಿತೋ ಇದರಿಂದ ದೇವರ ಪ್ರೀತಿಯ ರಸವು ಧಾರಳವಾಗಿ ಹರಿದು ದೇಶಕ್ಕೂ, ರಾಷ್ಟ್ರಕ್ಕೂ ಪರಿಮಳಿಸಿ ಉಪಯೋಗಕ್ಕೆ ಬಂತೇ ಹೊರತು ಅಪ್ರಯೋಜನಕ್ಕೆ ಕಾರಣವಾಗಲಿಲ್ಲ.

ಹೌದು ಪ್ರಿಯರೇ, ಸೂಲಗಿತ್ತಿಯರು ಬರುವುದಕ್ಕಿಂತ ಮುಂಚಿತವಾಗಿ ಇಸ್ರಾಯೇಲ್ಯರಿಗೆ ಸುಖಪ್ರಸವ ಆಗುತ್ತಿತ್ತು, ಮೋಶೆ ನಾಶವಾಗಬೇಕೆಂದು ಫರೋಹನ ಮುಳ್ಳು ಕಾಯುತ್ತಿತ್ತು. ಆ ಮುಳ್ಳಿನ ನಡುವೆ ಪುಷ್ಟಿಯಾಗಿ ಬೆಳೆದನು ಕಾರಣ ದೇವರ ದಯೆ ಮೋಶೆಯ ಮೇಲಿತ್ತು. ಅಂದು ಹನ್ನಳನ್ನು ಕೆಣಕಿ ಮನಸ್ಸಿನ ಸಮಾಧಾನ ಕೆಡಿಸಿ ವೇದನೆಗೆ ಒಳಪಡಿಸಿದ ಮುಳ್ಳಿನ ಮುಂದೆ ದೇವರು ಹನ್ನಳನ್ನು ಮಾನಿಸಿ ಆಕೆಯನ್ನು ನಲಿದಾಡುವಂತೆ ಮಾಡಿದನು ಹನ್ನಳಿಗೆ ದೇವರ ದಯೆ ದೊರಕಿತು. ಅಂದು ದೇವರ ದಯೆಹೊಂದಿಂತಹ 12 ಶಿಷ್ಯರ ಮುಂದೆ ಸದ್ದುಕಾಯರು, ಫರಿಸಾಯರು, ವೇದಪಂಡಿತರು, ರೋಮಾಯ ಅಧಿಕಾರಿಗಳು, ಈ ಎಲ್ಲಾ ಮುಳ್ಳುಗಳು ಇದ್ದರೂ ಆತ್ಮಗಳ ಸುಗ್ಗಿಯ ಕೊಯ್ಲನ್ನು ತಡೆಮಾಡಲಿಕ್ಕೆ ಸಾಧ್ಯವಾಗಲಿಲ್ಲ. 3000, 5000, ಹೀಗೆ ಸಭೆಯು ಬೆಳೆಯುತ್ತಾ ಹೋಯಿತು.

ಪ್ರಿಯ ದೇವ ಜನವೇ, ರೋಗ, ನಿಂದೆ, ಹಿಂಸೆ, ಸಂಕಟ, ತಿರಸ್ಕಾರ, ಅವಮಾನ, ಪರಿಹಾಸ್ಯ, ತಪ್ಪಿಗಸ್ಥಿಕೆ, ಸೆರೆವಾಸ, ದುಶ್ಚಟ, ಪಾಪ, ಶಾಪ ಈ ಎಲ್ಲಾ ಮುಳ್ಳುಗಳು ನಿಮ್ಮನ್ನು ಕಾಡುತ್ತಿರಬಹುದು ಇದೇ ಪರಿಸ್ಥಿತಿಯಲ್ಲಿ ವರುಷಗಳನ್ನು ದಾಟಿ ಬಂದಿರಬಹುದು ಇದಕ್ಕೆ ಎಂದು ಮುಕ್ತಿ ಎಂದು ಭಾರಪಡುತ್ತಿರುವವರಾಗಿರಬಹುದು. ಇಂದು ವರ್ಷಾಂತ್ಯಕ್ಕೆ ಬಂದಿರುವ ನಿಮ್ಮನ್ನು ನೀವೇ ಕ್ರಿಸ್ತನಲ್ಲಿ ಪರೀಕ್ಷಿಸಿಕೊಂಡು ಆತನಿಂದ ದೂರಹೋಗಿರುವುದಾದರೆ, ನಿಮ್ಮದೇ ಆದ ದಾರಿಯಲ್ಲಿ ನಡೆಯುತ್ತಿರುವುದಾದರೆ, ಕರ್ತನ ಸಂಬಂಧದಲ್ಲಿ ಬಿದ್ದು ಹೋಗಿರುವುದಾದರೆ, ದೇವರಿಗಾಗಿ ವೈರಾಗ್ಯವಾಗಿ ಪ್ರಕಾಶಿಸುವುದಕ್ಕೆ ಆಗುತ್ತಾ ಇಲ್ಲ, ನನ್ನ ಜೀವಿತದಲ್ಲಿ ಎಲ್ಲವೂ ತಡೆ ಆಗುತ್ತಾ ಇದೆ ಎಂಬ ಪ್ರಶ್ನೆ? ಕಾಡುತ್ತಿರುವುದಾದರೆ

ವಿಮೋ. 3:3–10ರಲ್ಲಿ ನೋಡುವಾಗ ಇಲ್ಲಿ ಮೋಶೆ ತನ್ನ ದಾರಿಯನ್ನು ಬಿಟ್ಟನು ಮತ್ತು ಇದನ್ನು ದೇವರು ಕೂಡಾ ನೋಡಿದನು. ಮತ್ತು ತನ್ನ ಸಮೀಪಸ್ಥನಾಗಿ ಬಂದ ಮೋಶೆ ಕರ್ತನಿಂದ ಆಶೀರ್ವದಿಸಲ್ಪಟ್ಟನು. ಮೋಶೆಯೂ ಅದುವರೆಗೂ ಉರಿಯುತ್ತಿದ್ದ ಅಗ್ನಿಯನ್ನು ನೋಡಿದನೇ ಹೊರತು ಅನುಭವಿಸಲಿಕ್ಕೆ ಸಾಧ್ಯವಾಗಲಿಲ್ಲ. ಯಾವಾಗ ತನ್ನ ದಾರಿಯನ್ನು

ನಾನು ನನ್ನ ಶ್ವಾಸವನ್ನು ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸುವೆನು (ಯೆಹೆ. ३७५).

ಬಿಟ್ಟನು ಆ ನಿಮಿಷದಲ್ಲೇ ದೇವರ ಅಗ್ನಿಯನ್ನು ಅನುಭವಿಸಿದನು.

ನೀವು ಯಾವಾಗ ದೇವರ ಸಮೀಪಕ್ಕೆ ಹೋಗುತ್ತಿರೋ ಆವಾಗಲೇ ನೀವು ಯಾರು ಆಗಿದ್ದಿರೆಂದು ಕರ್ತನು ನಿಮಗೆ ತೋರಿಸುತ್ತಾನೆ. ಮೋಶೆಗೇ, ಯೆಶಾಯನಿಗೆ, ಜಕ್ಕಾಯನಿಗೆ ಕೂಡಾ ಇದೇ ಸಂಭವಿಸಿತು. ನೀವು ದೇವರ ಬಳಿಗೆ ಹೋಗುವಾಗ ನಿಮಗೆ ಸಿಗುವಂಥ ಆಲೋಚನೆ ಕೂಡಾ ಇದೇ ಆಗಿದೆ (ಯೆಶಾ. 55:6–11). ಇದಕ್ಕಾಗಿ ಆಳವಾದ ಪ್ರಕಟಣೆ ಬೇಕಾಗಿಲ್ಲ.

* ನೀನು ಬಹಳ ಬೆಲೆಯುಳ್ಳ ಹರಿತವಾದ ಕತ್ತಿ ನೋಡುತ್ತಿ, ದೇವರು ನಿನಗೆ ಸಾಧಾರಣವಾದ ಕೋಲು ತೋರಿಸುತ್ತಾನೆ.
* ನೀನು ಇನ್ನೊಬ್ಬ ಅರಸನ ಯುದ್ಧವಸ್ತ್ರ, ಕವಚ, ತಾಮ್ರದ ಶಿರಸ್ತ್ರಾಣ, ಕತ್ತಿ ಧರಿಸುತ್ತಿ, ದೇವರು ನಿನಗೆ ಸಾಧರಣವಾದ ಐದು ನುಣುಪುಕಲ್ಲುಗಳನ್ನು ತೋರಿಸುತ್ತಾನೆ.
* ನೀನು ಮೂವತ್ತೇರಡು ಸಾವಿರ ಮಂದಿಯೊಂದಿಗೆ ಹೋಗುವುದಕ್ಕೆ ನೋಡುತ್ತಿ, ಆದರೆ ದೇವರು ನಿನಗೆ ಮುನ್ನೂರು ಮಂದಿಯೊಂದಿಗೆ ಹೋಗುವುದಕ್ಕೆ ಹೇಳುತ್ತಾನೆ.
* ನೀನು ವ್ಯವಸ್ಥಿತಬದ್ಧವಾದ ಹಳ್ಳ, ಕಾಗೆಯನ್ನೇ ಎದುರು ನೋಡುತ್ತಿ, ದೇವರು ನಿನಗೆ ನಿಸ್ಸಾಯಕಳಾಗಿರುವ ವಿಧವೆಯ ಮನೆಯನ್ನು ತೋರಿಸುತ್ತಾನೆ.
* ನೀನು ಇಲ್ಲೇ ಮಾತಾಡುತ್ತೇನೆ ಎಂದು ಹೇಳುತ್ತಿ, ದೇವರು ನಿನಗೆ ಕುಂಬಾರನ ಮನೆಗೆ ಹೋಗು ಎಂದು ಹೇಳುತ್ತಾನೆ.
* ನೀನು ವಿಶಾಲವಾದ ಸ್ಥಳದಲ್ಲಿ ಮಾತಾಡುವುದಕ್ಕೆ ಬಯಸುತ್ತಿ, ದೇವರು ನಿನಗೆ ಮನುಷ್ಯರ ಶಬ್ಧವಿಲ್ಲದ ಒಣಗಿದ ಎಲುಬುಗಳಿಂದ ಕೂಡಿದ ತಗ್ಗಾದ ಸ್ಥಳದಲ್ಲಿ ಮಾತಾಡುವುದಕ್ಕೆ ಹೇಳುತ್ತಾನೆ.

ಈ ಎಲ್ಲಾ ಆಲೋಚನೆಗಳು ಕೇವಲ ನಮಗೆ ಹಾಸ್ಯಸ್ಪದವಾಗಿ ಕಾಣಬಹುದು. ಇದರ ಹಿಂದೆ ಎಂದಿಗೂ ಬತ್ತಿಹೋಗದ ನಿರಂತರವಾಗಿ ಹರಿಯುವ ಆಶೀರ್ವಾದ ಇದೆ.

ಒಬ್ಬ ಸೇವಕರು ನಮ್ಮ ಬಳಿ ಹಂಚಿಕೊಂಡ ವಿಷಯವನ್ನು ತಿಳಿಸುತ್ತೇನೆ, ಕೆನೆತ್ ಕೂಪ್ಲನ್ ಎಂಬ ಸೇವಕರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣಿಸುವಾಗ ದೇವರು ಒಂದು ಹೊಲವನ್ನು ತೋರಿಸಿ ಈ ಹೊಲವನ್ನು ತೆಗೆದುಕೊಳ್ಳಲು ಹೇಳಿದರು. ಈ ಸೇವಕರು ಒಲ್ಲದ ಮನಸ್ಸಿನೊಂದಿಗೆ ದೇವರೇ ನೀನು ಹೇಳುತ್ತಿ ಅದಕ್ಕೆ ನಾನು ತಕ್ಕೊಳ್ಳುತ್ತೇನೆ ಅಂದು ಆ ಜಾಗವನ್ನು ತೆಗೆದುಕೊಂಡರು. ಕೆಲವು ದಿನಗಳಾದ ಬಳಿಕ ಸರಕಾರದವರು ಬಂದು ಈ ಸ್ಥಳದಲ್ಲಿ ಪೆಟ್ರೋಲಿಯಂ ಇದೆ ಈ ಸ್ಥಳವನ್ನು ಅಗೆಯಬಹುದ ಎಂದು ಸೇವಕರಲ್ಲಿ ಕೇಳಿದಾಗ ಸಂತೋಷಪೂರ್ವಕವಾಗಿ ಒಪ್ಪಿಕೊಂಡರು. ಆ ಸ್ಥಳದಲ್ಲಿ ಪೆಟ್ರೋಲ್ ಸಿಕ್ಕಿತು ಇದರ ನಿಮಿತ್ತವಾಗಿ ಸರ್ಕಾರದವರು ಈ ಸೇವಕರೊಂದಿಗೆ ಒಪ್ಪಂದಮಾಡಿಕೊಂಡು ಇದರಲ್ಲಿ ಪ್ರತಿ ಸಾರಿ ಪೆಟ್ರೋಲಿಯಂ ತೆಗೆಯುವಾಗ ಅದರಲ್ಲಿ ಬರುವ ಲಾಭಂಶದಲ್ಲಿ ಸ್ವಲ್ಪ ಭಾಗವನ್ನು ನಾವು ನಿಮಗೆ ಕೊಡುತ್ತೇವೆ ಎಂದರು. ಇದರ ನಿಮಿತ್ತವಾಗಿ ಸೇವಕರು ಬಹಳವಾಗಿ ಆಶೀರ್ವದಿಸಲ್ಪಟ್ಟರು.

ಪ್ರಿಯರೇ, ಕರ್ತನು ನಾನು ಮತ್ತು ನೀನು ಯೋಚನೆ ಮಾಡುವ ರೀತಿಯಲ್ಲಿ ಆತನಿಲ್ಲ. ಕರ್ತನು ತಾನೇ ಕರ್ತನಾಗಿದ್ದಾನೆ. ಆದುದರಿಂದ ಸೋತು ಹೋಗಬೇಡಿ ಆದಿ. 8:22, ಪ್ರಸ. 3:1 ವಾಕ್ಯದ ಪ್ರಕಾರವಾಗಿ ಒಂದು ಸಮಯ ನೇಮಕವಾಗಿದೆ ಸೆಕೆ, ಚಳಿ, ಮಳೆ, ಹಗಲು, ರಾತ್ರಿ ಇದಕ್ಕೊಂದು ಅಂತರವಿದೆ ಮತ್ತು ಸಮಯ ಕೂಡಾ ಇದೆ. ಅದೇ ಪ್ರಕಾರವಾಗಿ ಕರ್ತನು ತನ್ನ ಸಮಯದಲ್ಲಿ ನಿಮ್ಮ ಜೀವಿತದಲ್ಲಿ ನಿಮ್ಮ ಮೂಲಕವಾಗಿ ಮಾಡಬೇಕಾದವುಗಳನ್ನು ಮಾಡಿ ಮುಗಿಸುತ್ತಾನೆ (ಹಬ. 2:2–3, ಕೀರ್ತ. 37:7, ಜ್ಞಾನೋ. 23:18, 1 ಪೇತ್ರ. 5:6).

ಇದುವರೆಗೆ ಮುಳ್ಳುಗಳು ನಿಮ್ಮೊಂದಿಗೆ ಮಾತಾಡಿ ನಿಮ್ಮ ನೆಮ್ಮದಿ, ಆರೋಗ್ಯ, ಸಮಾಧಾನ, ಸಂತೋಷ, ಆಶೀರ್ವಾದ ನಷ್ಟಪಡಿಸಿರಬಹುದು. ನಿನ್ನಿಂದ ಏನು ಸಾಧ್ಯವಿಲ್ಲ, ರೋಗದಿಂದ ಬಿಡುಗಡೆಯಾಗುವುದಿಲ್ಲ ಎಂದು ಹೇಳಬಹುದು. ನೀವು ಸೋತು ಹೋಗಬೇಡಿ, ದೇವರನ್ನು ದೃಷ್ಟಿಸಿ, ಆತನ ವಾಕ್ಯವನ್ನು ನಂಬಿ ಅರಿಕೆ ಮಾಡಿರಿ (ಓಬದ್ಯ. 1:8). ಯೋಸೇಫನ ವಂಶವು ಜ್ವಾಲೆ, ಕರ್ತನ ಜ್ವಾಲೆಯ ಮುಂದೆ ಮಾರಕವಾದ ಎಲ್ಲಾ ಮುಳ್ಳುಗಳು ದಹಿಸಲ್ಪಡುತ್ತದೆ. ಕರ್ತನು ನಿಮ್ಮನ್ನು ಬಿಡುಗಡೆ ಮಾಡುತ್ತಾನೆ. ದೇವರ ದಯೆಯು ನಿಮಗೆ ದೊರಕುತ್ತದೆ.

ಕರ್ತನು ತಾನೇ ನಿಮ್ಮನ್ನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ, ಆಮೆನ್.

ನನ್ನ ವಾಸಸ್ಥಾನವು ಅವರ ಮಧ್ಯದಲ್ಲಿರುವದು; ನಾನು ಅವರಿಗೆ ದೇವರಾಗಿರುವೆನು,
ಅವರು ನನಗೆ ಪ್ರಜೆಯಾಗಿರುವರು (ಯೆಹೆ. 37:27).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅನೇಕರು ಉಪವಾಸ ಪ್ರಾರ್ಥನೆ ಮಾಡುತ್ತಾರೆ. ಏಕೆ ಉಪವಾಸ ಮಾಡುತ್ತಿರೀ ಎಂದು ಕೇಳಿದರೆ ಅವರಲ್ಲಿ ಉತ್ತರ ಇರುವುದಿಲ್ಲ. ಇನ್ನು ಕೆಲವರೂ ವಾರಕ್ಕೊಮ್ಮೆ ಮಾಡಲ್ಲಿಕ್ಕೆ ಇರುವುದರಿಂದ ಮಾಡುತ್ತೇನೆ, ಇನ್ನು ಕೆಲವರೂ ಆ ಸಭೆಯಲ್ಲಿ ಪಾ॥ ಹೇಳಿದ್ದರೆ ಅದಕ್ಕೆ ಮಾಡುತ್ತೇನೆ. ಆದಕಾರಣ ಉಪವಾಸ ಪ್ರಾರ್ಥನೆಯನ್ನು ಮಾಡುವುದಕ್ಕೆ ಮುಂಚಿತವಾಗಿ ಏಕೆ ಮಾಡುತ್ತೇನೆ ಎಂದು ತಿಳಿದುಕೊಳ್ಳಬೇಕು. ನಮ್ಮ ಸಭೆಯಲ್ಲಿ ಕೆಲವು ಕಾರಣಗಳಾಗಿ, ಸಭೆಯಾಗಿ ಉಪವಾಸ ಪ್ರಾರ್ಥನೆ ಮಾಡುತ್ತೇವೆ. 40 ದಿವಸ ಉಪವಾಸ ಪ್ರಾರ್ಥನೆ ಇಟ್ಟರೆ ಅನೇಕ ದೇವ ಸೇವಕರನ್ನು ಕರೆಯುತ್ತೇವೆ ಈ 40 ದಿವಸ ಉಪವಾಸ ಪ್ರಾರ್ಥನೆಯಲ್ಲಿ ಸಭೆಯಲ್ಲಿರುವ ಎಲ್ಲರೂ ಆಸಕ್ತಿಯಿಂದ ಭಾಗವಹಿಸುತ್ತಾರೆ. ಇದರಲ್ಲಿ ಅನೇಕರು ಪೂರ್ಣವಾಗಿ 40 ದಿವಸ ಉಪವಾಸ ಇರುತ್ತಾರೆ, ಕೆಲವರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಉಪವಾಸ ಮಾಡುತ್ತಾರೆ. ಯಾವ ಉದ್ದೇಶಕ್ಕಾಗಿ ಉಪವಾಸ ಇರುತ್ತೇವೆಯೋ ಆ ಉದ್ದೇಶ ನೇರವೇರುವಾಗ ಸಂತೋಷವಾಗುತ್ತವೆ. ನಮ್ಮ ಸೇವೆಯಲ್ಲಿ ಅನೇಕ ಕಠಿಣವಾದ ಸಮಸ್ಯೆಗಳನ್ನು ಉಪವಾಸ ಪ್ರಾರ್ಥನೆ ಮಾಡಿದಾಗ ಕರ್ತನಾದ ಯೇಸುಕ್ರಿಸ್ತನು ನೇರವೇರಿಸಿದ್ದಾನೆ.

2 ವಿಧವಾದ ಉಪವಾಸ ಪ್ರಾರ್ಥನೆ ಇದೆ.

1) ಕಪಟವಾದ ಉಪವಾಸ ಪ್ರಾರ್ಥನೆ

2) ಆತ್ಮೀಕ ಉಪವಾಸ ಪ್ರಾರ್ಥನೆ

**1) ಕಪಟವಾದ ಉಪವಾಸ ಪ್ರಾರ್ಥನೆ :** ನಮ್ಮ ಜೀವಿತದಲ್ಲಿ ಪಶ್ಚಾತ್ತಾಪ ಇಲ್ಲದ ಪರಿಶುದ್ಧತೆ ಇಲ್ಲದೆ ಶುದ್ಧೀಕರಣ ಇಲ್ಲದೆ ಮಾಡುವಂತಹ ಉಪವಾಸ ಪ್ರಾರ್ಥನೆಯು ದೇವರಿಂದ ಆಲಿಸಲ್ಪಡುವುದಿಲ್ಲ. ದೇವ ಸಮ್ಮುಖದಲ್ಲಿ ಅನೇಕ ಜನರು ಈ ರೀತಿ ಪ್ರಶ್ನೆ ಮಾಡುತ್ತಾರೆ. ಯೆಶಾ. 58:3 ನಾವು ಉಪವಾಸ ಮಾಡಿದ್ದೇವೆ. ನೀನು ಏಕೆ ? ಕಟಾಕ್ಷಿಸುವುದಿಲ್ಲ ನಮ್ಮ ಆತ್ಮವನ್ನು ಕುಂದಿಸಿಕೊಂಡಿದ್ದೇವೆ. ನೀನು ಗಮನಿಸುವುದೇಕೆ ಅಂದುಕೊಳ್ಳುತ್ತಾರೆ. ಅದಕ್ಕಾಗಿ ದೇವರು ತನ್ನ ಪ್ರವಾದಿಯಾದ ಯೆಶಾಯನ ಮೂಲಕ ತನ್ನ ಜನರನ್ನು ಎಚ್ಚರಿಸುವುದನ್ನು ನಾವು ಕಾಣಬಹುದು. **"ಗಂಟಲೆತ್ತಿ ಕೂಗು, ಸಂಕೋಚಪಡಬೇಡ, ಕೊಂಬಿನಂತೆ ದನಿಗೈದು ನನ್ನ ಜನರಿಗೆ ಅವರ ದ್ರೋಹವನ್ನು ತಿಳಿಸು, ಯಾಕೋಬವಂಶದವರಿಗೆ ಅವರ ಪಾಪಗಳನ್ನು ಅರುಹು. ಅವರಂತು ದಿನ ದಿನವೂ ನನ್ನ ದರ್ಶನಕ್ಕಾಗಿ ಬಂದು ನನ್ನ ಮಾರ್ಗವನ್ನು ತಿಳಿದುಕೊಳ್ಳುವದರಲ್ಲಿ ಹೆಚ್ಚಳಪಡುತ್ತಾರೆ. ತನ್ನ ದೇವರ ನಿಯಮಗಳನ್ನು ಬಿಡದೆ ಧರ್ಮವನ್ನಾಚರಿಸುವ ಜನಾಂಗವೋ ಎಂಬಂತೆ ಧೈರ್ಯವಾಗಿ ನನ್ನಿಂದ ನ್ಯಾಯ ವಿಧಿಗಳನ್ನು ಕೇಳಿಕೊಂಡು ದೇವದರ್ಶನದಲ್ಲಿ ಆನಂದಿಸುತ್ತಾರೆ"** (ಯೆಶಾ. 58:1–2). ಪುನ: ದೇವರು ಉಪವಾಸ ಮಾಡುವ ಜನರನ್ನು ಎಚ್ಚರಿಸುವುದೇನೆಂದರೆ **"ಇಗೋ, ನಿಮ್ಮ ಉಪವಾಸ ದಿನದಲ್ಲಿಯೂ ನಿಮ್ಮ ನಿತ್ಯದ ಕೆಲಸವನ್ನು ನಡಿಸಿ ನಿಮ್ಮ ಆಳುಗಳನ್ನು ದುಡಿತಕ್ಕೆಳೆಯುತ್ತೀರಿ. ನೋಡಿರಿ, ನಿಮ್ಮ ಉಪವಾಸದ ಫಲವೇನಂದರೆ ವ್ಯಾಜ್ಯ, ಕಲಹ, ಕೇಡಿನ ಗುದ್ದು, ಇವುಗಳೇ. ನೀವು ಈಗ ಮಾಡುವ ಉಪವಾಸವು ನಿಮ್ಮ ಪ್ರಾರ್ಥನೆಯನ್ನು ಉನ್ನತ ಲೋಕಕ್ಕೆ ಮುಟ್ಟಿಸತಕ್ಕದ್ದಲ್ಲ. ಮನುಷ್ಯನು ತನ್ನ ಆತ್ಮವನ್ನು ಕುಂದಿಸಿಕೊಳ್ಳುವುದಕ್ಕಾಗಿ ನಾನು ನೇಮಿಸಿದ ಉಪವಾಸದಿನವು ಇಂಥದೋ ಒಬ್ಬನು ಜೊಂಡಿನಂತೆ ತಲೆಯನ್ನು ಬೊಗ್ಗಿಸಿಕೊಂಡು ಗೋಣೀತಟ್ಟನ್ನೂ, ಬೂದಿಯನ್ನೂ, ಆಸನಮಾಡಿಕೊಳ್ಳುವದು ಯೆಹೋವನಿಗೆ ಸಮರ್ಪಕವಾದ ಉಪವಾಸ ಎನ್ನುತ್ತೀರೋ?"** (ಯೆಶಾ. 58:4–5). ಪ್ರಿಯರೇ, ಈ ಮೇಲಿನ ವಾಕ್ಯಗಳ ಮೂಲಕ ಒಂದು ದೊಡ್ಡ ಸತ್ಯವನ್ನು ತಿಳಿದುಕೊಳ್ಳಬಹುದು. ದೇವರಿಗೆ ನಾವು ಮಾಡುವ ಉಪವಾಸ ಪ್ರಾರ್ಥನೆಗಿಂತಲೂ ಉಪವಾಸ ಮಾಡುವಂತಹ ವ್ಯಕ್ತಿಯ ಹೃದಯ ಮುಖ್ಯವಾದದ್ದು. ನಾವು ಆದಿ. 4:5 ವಾಕ್ಯದಲ್ಲಿ **"ಯೆಹೋವನು ಹೇಬೆಲನನ್ನೂ, ಅವನ ಕಾಣಿಕೆಯನ್ನೂ ಮೆಚ್ಚಿ ಕಾಯಿನನನ್ನೂ, ಅವನ ಕಾಣಿಕೆಯನ್ನೂ ಮೆಚ್ಚಲಿಲ್ಲ".** ಪಶ್ಚಾತ್ತಾಪದ ಹೃದಯದೊಂದಿಗೆ ಶುದ್ಧೀಕರಿಸಲ್ಪಟ್ಟ ಕರಗಳೊಂದಿಗೂ ಪರಿವರ್ತನೆಯಾದ ಜೀವಿತದೊಂದಿಗೂ ನಾವು ದೇವರ ಸಮ್ಮುಖಕ್ಕೆ ಹೋಗಬೇಕು. ಏಕೆಂದರೆ? ದೇವರ ವಾಕ್ಯ ಹೇಳುತ್ತದೆ, **"ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ"** (ಕೀರ್ತ. 66:18). **"ಇಗೋ, ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ; ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ. ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ"** (ಯೆಶಾ. 59:1–2).

**"ನೀವು [ನನ್ನ ಕಡೆಗೆ] ಕೈಯೆತ್ತುವಾಗ ನಿಮ್ಮನ್ನು ನೋಡದಂತೆ ನನ್ನ ಕಣ್ಣುಗಳನ್ನು ಮರೆಮಾಡಿಕೊಳ್ಳುವೆನು; ಹೌದು, ನೀವು ಬಹು ಪ್ರಾರ್ಥನೆಗಳನ್ನು ಮಾಡಿದರೂ ನಾನು ಕೇಳೆನು, ನಿಮ್ಮ ಕೈಗಳಲ್ಲಿ ರಕ್ತವು ತುಂಬಿದೆ. ನಿಮ್ಮನ್ನು ತೊಳೆದುಕೊಳ್ಳಿರಿ, ಶುದ್ಧಿಮಾಡಿಕೊಳ್ಳಿರಿ, ನನ್ನ ಕಣ್ಣೆದುರಿನ ನಿಮ್ಮ ದುಷ್ಕೃತ್ಯಗಳನ್ನು ತೊಲಗಿಸಿರಿ, ದುರಾಚಾರವನ್ನು ಬಿಡಿರಿ; ಸದಾಚಾರವನ್ನು ಅಭ್ಯಾಸಮಾಡಿರಿ; ನ್ಯಾಯನಿರತರಾಗಿರಿ, ಹಿಂಸಕನನ್ನು ತಿದ್ದಿ ಸರಿಪಡಿಸಿರಿ, ಅನಾಥನಿಗೆ ನ್ಯಾಯತೀರಿಸಿರಿ, ವಿಧವೆಯ ಪಕ್ಷವಾಗಿ ವಾದಿಸಿರಿ"** (ಯೆಶಾ. 1:15–17).

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

ನಿಮ್ಮ ಪಿತೃಗಳು ವಾಸಿಸಿದ ದೇಶದಲ್ಲಿ ಅವರೂ ಅವರ ಸಂತಾನದವರೂ ತಲತಲಾಂತರವಾಗಿ ವಾಸಿಸುವರು (ಯೆಹೆ. 37:25).

» ರಾಜ್ಯ »

www.vijaykarnataka.com

8 ವರ್ಷ ಹಿಂದೆ ನಾಪತ್ತೆಯಾದ ಮಾನಸಿಕ ಅಸ್ವಸ್ಥನಿಗೆ ಆರೈಕೆ • ಗುಣಮುಖನಾಗಿ ಮರಳಿ ಊರಿಗೆ

# ಕತ್ತಲಲ್ಲಿದ್ದ 'ರವಿ'ಬಾಳಲ್ಲಿ 'ವಿಶ್ವಾಸ'ದ ಹೊಂಗಿರಣ

▪ ಲೋಕೇಶ್ ನೀರಬಿದಿರೆ ಮೈಸೂರು

ದೃಶ್ಯ-1: ಮಂಗಳೂರು ಬಳಿಯ ಕಿನ್ನಿಗೋಳಿಯ ಪರಿಸರ. ಅಲ್ಲೊಬ್ಬ ಮಾನಸಿಕ ಅಸ್ವಸ್ಥ ಯುವಕ. ಹರಿದ ಕೊಳಕು ಬಟ್ಟೆ, ಕಸದ ತೊಟ್ಟಿಯಿಂದ ಕೊಳೆತ ಆಹಾರ ಮೊಗೆದು ತಿನ್ನುತ್ತಿದ್ದ. ಅಂಗಡಿಯವರಿಗೆ, ಶಾಲೆಗೆ ತೆರಳುವ ಮಕ್ಕಳಿಗೆ ಕಲ್ಲೆಸೆದು ಕಿರುಕುಳ ನೀಡುತ್ತಿದ್ದ. ಆಗೊಮ್ಮೆ ಜೋರು ನಗು, ಕಿರುಚಾಟ. ವಿಚಿತ್ರ ವರ್ತನೆ. ಭಯದ ವಾತಾವರಣ.

ದೃಶ್ಯ-2: ಮಂಡ್ಯದ ಕೆಆರ್‌ಎಸ್‌ನ ನಿವಾಸ. ಅಲ್ಲೊಬ್ಬ ಶಾಂತ ಸ್ವಭಾವದ ಯುವಕ. ಮನೆಗೆ ಬಂದವರ ಜತೆ ಪ್ರೀತಿಯ ಮಾತು. ತುಂಬಾ ಶಾಂತ ಚಿತ್ತತೆ. ಮಾವ, ದೊಡ್ಡಮ್ಮ, ದೊಡ್ಡಪ್ಪ, ಬಾವ ಎಲ್ಲರನ್ನೂ ಪ್ರೀತಿ ಗೌರವದಿಂದ ಮಾತಾಡಿಸುತ್ತಾನೆ.

ಈ ಎರಡೂ ದೃಶ್ಯಗಳಲ್ಲಿ ಇರುವ ವ್ಯಕ್ತಿ ಒಬ್ಬನೇ ಅಂದರೆ ನೀವು ನಂಬುತ್ತೀರಾ?. ಆಶ್ಚರ್ಯವಾದರೂ ನಂಬಲೇ ಬೇಕು. ಈತನ ಹೆಸರು ರವಿಕುಮಾರ್.

ಮಾನಸಿಕ ಅಸ್ವಸ್ಥನಾಗಿ ಎಲ್ಲೆಲ್ಲೋ ಅಲೆದಾಡುತ್ತಿದ್ದ, ವಿಚಿತ್ರವಾಗಿ ವರ್ತಿಸುತ್ತಿದ್ದ ರವಿಕುಮಾರ್ 8 ವರ್ಷ ಬಳಿಕ ಈಗ ಸಹಜ ಸ್ಥಿತಿಗೆ ಮರಳಿದ್ದಾನೆ. ಉಡುಪಿಯ 'ಅಮರ ವಿಶ್ವಾಸದ ಮನೆ' ರವಿಯ ಬಾಳಲ್ಲಿ 'ಹೊಸಬೆಳಕು' ಮೂಡಿಸಿದೆ. ಗುಣಮುಖ ನಾದ ರವಿಯನ್ನು ವಿಶ್ವಾಸದ ಮನೆಯವರು ಆತನ ಊರಿಗೆ ಕರೆ ತಂದಾಗ ತಂದೆ ಸ್ವೀಕರಿಸಲಿಲ್ಲ. ಸೋದರ ಮಾವ ಪಾಲಹಳ್ಳಿಯ ರಾಮೇಗೌಡ ಮತ್ತು ಕುಟುಂಬದವರು ಪ್ರೀತಿಯಿಂದ ಬರಮಾಡಿಕೊಂಡರು.

ಯಾರು ರವಿಕುಮಾರ್?: ಸೋದರ ಮಾವ, ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯ ರೈತ ರಾಮೇಗೌಡ ಹೇಳುವ ಪ್ರಕಾರ ರವಿಯ 'ದುರಂತ' ಇತಿಹಾಸ- ವರ್ತಮಾನ ಇಂತಿದೆ.

ಈತ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಬೆಳಗೊಳದ ಮರಿಗೌಡ-ಕಮಲಮ್ಮ ದಂಪತಿ ಪುತ್ರ. ಕೌಟುಂಬಿಕ ಕಲಹದ ಕಾರಣ ಕಮಲಮ್ಮ ತನ್ನ ಐದು ವರ್ಷದ ಪುತ್ರಿ ಮಂಜುಳಾ ಜತೆ ಆರ್‌ಬಿಎಲ್‌ಎಲ್ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು. 1980ರ ಸುಮಾರಿಗೆ ಈ ಘಟನೆ ನಡೆದಾಗ ರವಿಕುಮಾರ್ 9 ತಿಂಗಳ ಹಸುಳೆ.

ನಂತರ ಮರಿಗೌಡ ಬೇರೆ ಮದುವೆಯಾದ. ರವಿ ನಿರ್ಲಕ್ಷ್ಯಕ್ಕೆ ತುತ್ತಾದ. ಹಲವು ವರ್ಷಗಳ ಬಳಿಕ, 'ನನ್ನ 2ನೇ ಪತ್ನಿಯ ಇಬ್ಬರು ಮಕ್ಕಳನ್ನು ರವಿ ವಿಷಹಾಕಿ ಕೊಲ್ಲಲು ಯತ್ನಿಸಿದ' ಎಂಬ ಆರೋಪ ವನ್ನು ಮರಿಗೌಡನೇ ತನ್ನ ಮಗನ ಮೇಲೆ ಹೊರಿಸಿದ. ಇದರಿಂದ ಆತ ಮಾನಸಿಕವಾಗಿ ಕುಗ್ಗಿಹೋದ.

'ನಂತರ ನಾವೇ ರವಿಯನ್ನು ಸುಪರ್ದಿಗೆ ಪಡೆದು ಕೊಂಡು ಸಾಕತೊಡಗಿದೆವು. ಆತನನ್ನು ಎಸ್ಸೆಸ್ಸೆಲ್ಸಿ ವರೆಗೆ ಓದಿಸಿದ್ದೇವೆ. ನಂತರ ನನ್ನ ಪ್ರಿಂಟಿಂಗ್ ಪ್ರೆಸ್‌ನಲ್ಲೇ ಕೆಲಸ ಮಾಡುತ್ತಿದ್ದ, ಕೆಲ ವರ್ಷದ ನಂತರ ಮರಿಗೌಡರ ಅಣ್ಣ ಕೆಂಪೇಗೌಡರ ಕೊಲೆ ಪ್ರಕರಣ ದಲ್ಲಿ ರವಿಯನ್ನು ಆರೋಪಿಯನ್ನಾಗಿಸಲಾಯಿತು. ವಿಚಾರಣಾಧೀನ ಕೈದಿಯಾಗಿ ಮೂರು ವರ್ಷ ಮಂಡ್ಯ ಕಾರಾಗೃಹದಲ್ಲಿದ್ದು, ನಿರಪರಾಧಿಯೆಂದು ಬಿಡುಗಡೆಯಾಗಿದ್ದ...' ಎಂದರು ರಾಮೇಗೌಡ.

**'ಸುಳಿವಿಲ್ಲ'ದಂತೆ ಕಾಣೆಯಾದ:** ಬದುಕಿನಲ್ಲಿ ಹೊಡೆತಗಳ ಮೇಲೆ ಹೊಡೆತ ಬಿದ್ದಿದ್ದರಿಂದ ಜೈಲಿನಿಂದ ಬಿಡುಗಡೆಯಾಗುವ ವೇಳೆಗೆ ಮಾನಸಿಕವಾಗಿ ಇನ್ನಷ್ಟು ಅಸ್ವಸ್ಥನಾಗಿದ್ದ. ನೆನಪಿನ ಶಕ್ತಿ ಕುಂದಿತ್ತು. ಪೊಲೀಸರೇ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಕೊಡಿಸಿದ್ದರು. ಬಳಿಕ ಕೆಆರ್‌ಎಸ್‌ನಲ್ಲಿ ರಾಮೇಗೌಡರ ಮುದ್ರಣಾಲಯದಲ್ಲೇ ಕೆಲಸ. ಹೀಗೆ ಇದ್ದಾಗ, ಒಂದು ದಿನ ಇದ್ದಕ್ಕಿದ್ದಂತೆ ಕಾಣೆಯಾದ. ಮೈಸೂರು, ಬೆಂಗಳೂರು ಎಲ್ಲ ಕಡೆ ಹುಡುಕಿದರೂ ಪತ್ತೆ ಇಲ್ಲ. ಕೆಆರ್‌ಎಸ್ ಠಾಣೆಯಲ್ಲಿ ಕಾಣೆ ಕೇಸು ದಾಖಲಾಯಿತು. ಪತ್ರಿಕೆಗಳಲ್ಲೂ ಪ್ರಕಟವಾದರೂ ಪ್ರಯೋಜನವಾಗಲಿಲ್ಲ.

'ಅದೆಲ್ಲ ಆಗಿ, ಎಂಟು ವರ್ಷದ ಬಳಿಕ ಆತನನ್ನು ನೋಡು ತ್ತಿದ್ದೇವೆ. ದೇವರು ದೊಡ್ಡವನು. ಆತನನ್ನು ವಿಶ್ವಾಸದ ಮನೆಯ ಮೂಲಕ ಮರಳಿ ದೊರಕಿಸಿಕೊಟ್ಟ' ಎಂದು ನಿಟ್ಟುಸಿರಾದರು ರಾಮೇಗೌಡ.

**ತಂದೆಗೆ ಬೇಡವಾದ ಮಗ:** ರವಿಯನ್ನು 'ವಿಶ್ವಾಸದ ಮನೆ' ಯವರು ಆ.22ರಂದು ಬೆಳಗೊಳದ ಆತನ ಮನೆಗೆ ಕರೆ ತಂದಾಗ ತಂದೆ ಮರಿಗೌಡ ಸ್ವೀಕರಿಸಲು ನಿರಾಕರಿಸಿದ. 'ಆತ ನನ್ನ ಅಣ್ಣನನ್ನು ಕೊಂದವನು. ಐದು ವರ್ಷ ಜೈಲು ಶಿಕ್ಷೆ ಅನುಭವಿಸಿ ದ್ದಾನೆ. ದುಷ್ಕೃತ್ಯ ಮಾಡಿದಂದೇ ನಮಗೂ ಆತನಿಗೂ ಸಂಬಂಧ ಮುರಿದಿದೆ. ನನ್ನ ಇಬ್ಬರು ಮಕ್ಕಳನ್ನೂ ವಿಷವಿಟ್ಟು ಕೊಲ್ಲಲು ಯತ್ನಿಸಿದ್ದ. ಇಂಥವನನ್ನು ಸ್ವೀಕರಿಸಲ್ಲ' ಎಂದು ಕಡ್ಡಿ ಮುರಿದಂತೆ ಹೇಳಿದ. ಆಶ್ರಮದ ಮನೆಯವರು ರಾಮೇಗೌಡರ ದೂರವಾಣಿ ಸಂಖ್ಯೆ ನೀಡಿದ ನಂತರ ಸಂಸ್ಥೆಯವರು ಅಲ್ಲಿಗೆ ಕರೆತಂದು ಒಪ್ಪಿಸಿ ದರು. ಈಗ ಕೆಆರ್ ಎಸ್ ಬಳಿ ದೊಡ್ಡಮ್ಮನ ಮನೆಯಲ್ಲಿದ್ದಾನೆ.



**ಮಂಡ್ಯ ಶ್ರೀರಂಗ ಪಟ್ಟಣದ ಕೆಆರ್ ಎಸ್‌ನ ನಿವಾಸದಲ್ಲಿ ರವಿ ಕುಮಾರ್‌ನನ್ನು ಕುಟುಂಬದವರಿಗೆ ಒಪ್ಪಿಸಿದ ಸಂದರ್ಭ. ಸೋದರ ಮಾವ ರಾಮೇಗೌಡ, ಉಡುಪಿ ವಿಶ್ವಾಸದ ಮನೆಯ ಪಾಸ್ಟರ್ ಸುನಿಲ್ ಜಾನ್ ಡಿಸೋಜ ಇದ್ದರು.**

## 'ಆತ್ಮವಿಶ್ವಾಸ' ತುಂಬುವ ವಿಶ್ವಾಸದ ಮನೆ

**ಉಡುಪಿಯ ಶಂಕರಪುರದ ಯೇಸುಪುರದಲ್ಲಿದೆ ಮಾನಸಿಕ ಅಸ್ವಸ್ಥರ ಪುನರ್ವಸತಿ ಕೇಂದ್ರ 'ಅಮರ ವಿಶ್ವಾಸದ ಮನೆ'. ಡಿಜೆಎಂ ಬೆಥೆಲ್ ಚರ್ಚ್ ಟ್ರಸ್ಟ್‌ನ ನೇತೃತ್ವದಲ್ಲಿ ನಡೆಯುತ್ತಿರುವ ಸಂಸ್ಥೆಗೆ ಪಾಸ್ಟರ್ ಸುನಿಲ್ ಜಾನ್ ಡಿಸೋಜ ಅಧ್ಯಕ್ಷರು. 2000ದ ಜನವರಿಯಲ್ಲಿ ಟ್ರಸ್ಟ್ ಶುರು. ಅನಾಥರು, ನಿರ್ಗತಿಕರು, ಮಾನಸಿಕ ಅಸ್ವಸ್ಥರು, ವೃದ್ಧರು, ಅಂಗವಿಕಲರಿಗೆ ಚಿಕಿತ್ಸೆ, ಆರೈಕೆ, ಪುನರ್ವಸತಿ ಕಲ್ಪಿಸಲಾಗುತ್ತಿದೆ. ಮಾನಸಿಕ ಅಸ್ವಸ್ಥರಲ್ಲಿ ಇದುವರೆಗೆ ರವಿ ಸೇರಿ 119ಮಂದಿ ಗುಣಮುಖರಾಗಿ ಮನೆ ಸೇರಿದ್ದಾರೆ. ಬಿಹಾರ, ಒರಿಸ್ಸಾ, ಅಸ್ಸಾಂ, ಕೋಲ್ಕತ್ತಾ, ಮುಂಬಯಿ, ಪುಣೆ, ಕೇರಳ, ಗೋವಾ, ಗುಜರಾತ್, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದ ನಾನಾ ಭಾಗಗಳ ಜನರು ಇಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಪ್ರಸ್ತುತ ಕೇಂದ್ರದಲ್ಲಿ 200 ಮಂದಿ ಇದ್ದಾರೆ ಎನ್ನುತ್ತಾರೆ ಸುನಿಲ್ ಡಿಸೋಜ. ಮೊ: 9902334941.**

ರವಿಕುಮಾರ್ ಕಿನ್ನಿಗೋಳಿಯ ದಾಮಸ್ ಕಟ್ಟೆ ಬಳಿಯ ಕೆಂ ಚರ್ಚ್ ಸುತ್ತಮುತ್ತಲ ಪರಿಸರದಲ್ಲಿ ಸಿಕ್ಕಿದ. ಮಾನಸಿಕ ಅಸ್ವಸ್ಥನಾಗಿದ್ದ ಈತ ಅಂಗಡಿಯವರು, ಶಾಲಾ ಮಕ್ಕಳಿಗೆ ತೊಂದರೆ ಕೊಡುತ್ತಿದ್ದ. ಕಸದ ತೊಟ್ಟಿಗೆ ಎಸೆದ ಆಹಾರ ಆಯ್ದು ತಿನ್ನುತ್ತಿದ್ದ. ಕೊಳಕು ಬಟ್ಟೆ ತೊಟ್ಟಿದ್ದ. 2006ರ ಆಗಸ್ಟ್‌ನಲ್ಲಿ ನಮ್ಮ ಕೇಂದ್ರಕ್ಕೆ ತಂದಾಗ ಆತನಿಗೆ ನೆನಪಿನ ಶಕ್ತಿಯೇ ಇರಲಿಲ್ಲ. ಆರು ವರ್ಷದ ಚಿಕಿತ್ಸೆ ಬಳಿಕ ಗುಣಮುಖನಾಗಿದ್ದಾನೆ. ಕೆಲ ದಿನಗಳ ಹಿಂದೆ ಮಂಡ್ಯ, ಬೆಳಗೊಳ ಎಂದು ಹೇಳಲು ಶುರು ಮಾಡಿದ್ದ. ಸಹಜ ಸ್ಥಿತಿಗೆ ಮರಳಿ ಊರಿಗೆ ಹೋಗುವ ಇಂಗಿತ ವ್ಯಕ್ತಪಡಿಸಿದ್ದರಿಂದ ಕರೆತರಲಾಗಿದೆ.

**-ಪಾಸ್ಟರ್ ಸುನಿಲ್ ಜಾನ್ ಡಿಸೋಜ**
ಡಿಜೆಎಂಬಿಸಿ ಟ್ರಸ್ಟ್ ಅಧ್ಯಕ್ಷ, ಉಡುಪಿ.

**ಎಂಟು ವರ್ಷಗಳ ಹಿಂದೆ ಕಾಣೆಯಾದ ನಮ್ಮ ಹುಡುಗ ಸಿಕ್ಕಿರುವುದು ಖುಷಿಯಾಗಿದೆ. 'ವಿಶ್ವಾಸದ ಮನೆ'ಯವರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ. ರವಿಗೆ ಈಗ 28 ವರ್ಷ. ಅವನಿಗೆ ಮನೆ ಕಟ್ಟಿಸಿಕೊಡುತ್ತೇವೆ, ಮದುವೆ ಮಾಡುತ್ತೇವೆ. ಅವನು ಖುಷಿಯಿಂದ ಇರುವಂತೆ ನೋಡಿಕೊಳ್ಳುತ್ತೇವೆ. ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬಾಳುವಂತೆ ನಾವು ಮಾಡುತ್ತೇವೆ. -ರಾಮೇಗೌಡ,** ರವಿಯ ಸೋದರ ಮಾವ, ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲೂಕು

## ಆಶ್ರಮದ ಅವಶ್ಯಕತೆಗಳು

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ

**ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ**

**9902334941, 08202002781, 09964070654.**

ಯೆಹೋವನು ತನ್ನ ಜನರಿಗೆ ಆಶ್ರಯವೂ ಇಸ್ರಾಯೇಲ್ಯರಿಗೆ ರಕ್ಷಣದುರ್ಗವೂ ಆಗುವನು
(ಯೋವೇ. 3:16).

# ಸಾಕ್ಷಿಯ ಸ್ವರ

ನನ್ನ ಹೆಸರು ಶ್ವೇತಾ ನಾನು ಹಿಂದೂ ಕುಟುಂಬದಲ್ಲಿ ಹುಟ್ಟಿ ಬೆಳೆದವಳು. ನನ್ನ ವಯಸ್ಸು 23 ನನಗೆ ಮದುವೆಯಾಗಿ 5 ವರ್ಷ ಆಗಿದೆ. ನನಗೆ 2 ಮಕ್ಕಳು ಇದ್ದಾರೆ. ಒಂದು ಗಂಡು ಮತ್ತು ಹೆಣ್ಣು ಇತ್ತೀಚಿನ ಕೆಲವು ತಿಂಗಳುಗಳ ಹಿಂದೆ ನನ್ನ ಮನಸ್ಸಿನ ಸಮಾಧಾನ ಕಳೆದುಕೊಂಡು ಇದೆ. ನನಗೆ ಗೊತ್ತಿಲ್ಲದೆ ಕುಡಿಯುವ ಚಟ ಅಭ್ಯಾಸವಾಯಿತು. ಅದರ ನಂತರ ಕುಡಿಕತನದ ಚಟಕ್ಕೆ ಬಲಿಯಾಗಿ ಬಿಟ್ಟೆ. ನಾನು ಕುಡಿಕತನ ಬಿಡುವುದಕ್ಕೆ ಎಷ್ಟೇ ಪ್ರಯತ್ನಿಸಿದರೂ ನನ್ನಿಂದ ಸಾಧ್ಯ ಆಗಲಿಲ್ಲ. ಇದರಿಂದ ನನ್ನ ದಾಂಪತ್ಯ ಜೀವಿತದಲ್ಲಿ ಸಮಸ್ಯೆ ಪ್ರಾರಂಭವಾಯಿತು. ಗಂಡನು ಜಗಳವಾಡುವುದಕ್ಕೆ ಪ್ರಾರಂಭಮಾಡಿದರು. ನನ್ನ ಗಂಡ ವಿವಾಹವಿಚ್ಛದನೆ ಮಾಡುತ್ತೇನೆಂದು ತಿಳಿಸಿದರು. ನನ್ನ ಮಕ್ಕಳಿಗೂ ಕೂಡಾ ತುಂಬಾ ದು:ಖವಾಯಿತು. ನನ್ನ ತಾಯಿ ಮನೆಯವರಿಗೆ ಈ ವಿಷಯ ತಿಳಿದು ತಾಯಿ ಹಾಗೂ ತಮ್ಮ ಬೇಸರಗೊಂಡರು. ಇತ್ತ ಕಡೆ ಬಿಡುಗಡೆಯಿಲ್ಲದೆ ಅತ್ತ ಕಡೆ ಸಮಾಧಾನ ಕಳೆದುಕೊಂಡು ಈ ಚಟವನ್ನು ನನಗೆ ಯಾರು ಕಲಿಸಿಕೊಡಲಿಲ್ಲ. ಆದರೆ ಈ ಚಟ ಹೇಗೆ ಬಂತೋ ಎಂದು ನನಗೆ ತಿಳಿಯಲಿಲ್ಲ. ನನ್ನ ಕುಡಿಯುವ ಚಟದ ನಿಮಿತ್ತವಾಗಿ ಮನಸ್ಸಿನ ಸಮಾಧಾನ ಮಾತ್ರವಲ್ಲದೆ ಶರೀರದ ಆರೋಗ್ಯವನ್ನು ಕಳೆದುಕೊಂಡೆ. ಜೀವಿತವೇ ನನಗೆ ಬೇಸರವಾಯಿತು. ಈ ಸಂದರ್ಭದಲ್ಲಿ ನನ್ನ ಅಕ್ಕನವರು ರಕ್ಷಣೆ ಹೊಂದಿದರು. ಅವರು ನನಗೆ ಯೇಸುಕ್ರಿಸ್ತನ ವಿಷಯವಾಗಿ ತಿಳಿಸಿದರು. ಯೇಸುಕ್ರಿಸ್ತನು ಮಾತ್ರ ಕುಡಿಕತನ ಹಾಗೂ ಪ್ರತಿಯೊಂದು ದುಚ್ಚಟದಿಂದ ಬಿಡುಗಡೆಮಾಡಲು ಸಾಧ್ಯ. ಆತನು ಕನಿಕರವುಳ್ಳವನು ಹಾಗೂ ಪ್ರೀತಿಸ್ವರೂಪನು, ಪ್ರಾರ್ಥನೆಯನ್ನು ತಕ್ಷಣಕೇಳುವವನು, ಈ ಲೋಕದಲ್ಲಿ ತಳ್ಳಲ್ಪಟ್ಟವರನ್ನು ಪ್ರೀತಿಯಿಂದ ಬದಲಾಯಿಸುವವನು ಸತ್ತ ನಂತರ ನಿತ್ಯ ಜೀವಿತವನ್ನು ಕೊಡುವವನು ಪಾಪದ ಶಿಕ್ಷೆಯಾದ ನರಕದಿಂದ ಬಿಡುಗಡೆಕೊಡುವವನು ಎಂದು ನನ್ನ ಅಕ್ಕನವರು ತಿಳಿಸಿದರು. ಯೋಹಾ. 8:36 ಹೇಳುತ್ತದೆ, ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ಶಾಶ್ವತವಾದ ಬಿಡುಗಡೆ. 2 ಕೊರಿ. 3:17 ಎಲ್ಲಿ ದೇವರ ಆತ್ಮನು ಇದ್ದಾನೋ ಅಲ್ಲಿ ಬಿಡುಗಡೆ ಇದೆ. **"ಶಾಂತಿಯನ್ನು ನಿಮಗೆ ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ."** (ಯೋಹಾ. 14:27). ಅಂದು ನನ್ನ ಅಕ್ಕನವರ ಮೂಲಕ ಬಿಡುಗಡೆ ಕೊಡುವ ಯೇಸುಕ್ರಿಸ್ತನ ಬಗ್ಗೆ ತಿಳಿದು ತುಂಬಾ ಸಂತೋಷವಾಯಿತು. ನಿರೀಕ್ಷೆಯಿಲ್ಲದ ನನ್ನ ಜೀವಿತಕ್ಕೆ ನಿರೀಕ್ಷೆ ಬಂತು. ಮಾತ್ರವಲ್ಲದೆ ಅನೇಕರನ್ನು ಬಿಡುಗಡೆ ಮಾಡಿದ ಯೇಸುಕ್ರಿಸ್ತನು ನನಗೂ ಈ ದುಚ್ಚಟದಿಂದ ಬಿಡುಗಡೆಮಾಡಿ ನಾನು ಕಳಕೊಂಡಿರುವ ದಾಂಪತ್ಯ ಜೀವಿತದ ಸಮಾಧಾನ, ನನ್ನ ಮನಸ್ಸಿನ ಸಮಾಧಾನ, ಶರೀರದ ಆರೋಗ್ಯ, ಎಲ್ಲರ ನಂಬಿಕೆಯನ್ನು ಪುನ: ಯೇಸುಕ್ರಿಸ್ತನು ಕೊಡುತ್ತಾನೆಂಬ ನಂಬಿಕೆ ನನ್ನೊಳಗೆ ಬಂದು ನಾನು ಸತ್ಯವೇದ ಓದಲು ಆರಂಭಿಸಿದೆ ಮಾತ್ರವಲ್ಲದೆ ನನ್ನ ಅಕ್ಕನ ಜೊತೆಯಲ್ಲಿ ಶಂಕರಪುರದಲ್ಲಿರುವ ಬೇತೇಲ್ ಚರ್ಚ್‌ನಲ್ಲಿ ನಡೆಯುವ ಉಪವಾಸ ಪ್ರಾರ್ಥನೆಯಲ್ಲಿ ನಾನು ಪಾಲು ತೆಗೆದುಕೊಂಡೆನು. ಆ ಪ್ರಾರ್ಥನೆಯಲ್ಲಿ ಪಾ॥ ಸುನಿಲ್ ಜಾನ್ ಡಿ'ಸೋಜಾರವರು ನನಗೋಸ್ಕರ ಪ್ರಾರ್ಥಿಸಿದರು. ನನ್ನೊಳಗೆ ಇರುವ ದುರಾತ್ಮ ಬಿಟ್ಟು ಹೋಯಿತು, ಶರೀರವೆಲ್ಲಾ ಹಗುರುವಾಗಿ ನನ್ನ ಮನಸ್ಸಿಗೆ ಸಮಾಧಾನ ಉಂಟಾಯಿತು. ಅಂದಿನಿಂದ ಈವತ್ತಿನವರೆಗೆ ಆರು ತಿಂಗಳಾಗಿದೆ. ನನಗೆ ಕುಡಿಕತನದ ಬಗ್ಗೆ ಆಸಕ್ತಿಯಾಗಲಿ, ಅದರ ಬಗ್ಗೆ ಯೋಚನೆಯಾಗಲಿ ಬರಲಿಲ್ಲ. ಕರ್ತನಾದ ಯೇಸುಕ್ರಿಸ್ತನು ನನಗೆ ಸಂಪೂರ್ಣ ಬಿಡುಗಡೆ ಕೊಟ್ಟಿದ್ದಾನೆ. ನನ್ನ ನಿಮಿತ್ತ ಇವತ್ತು ತಾಯಿ ತಮ್ಮಂದಿರು, ಗಂಡ ಮಕ್ಕಳು, ಗಂಡನ ಮನೆಯವರೆಲ್ಲರೂ ಆಶ್ಚರ್ಯಚಕಿತರಾಗಿ ಸಂತೋಷ ಪಡುತ್ತಿದ್ದಾರೆ. **"ಇದು ಯೆಹೋವನಿಂದಲೇ ಆಯಿತು; ನಮಗೆ ಆಶ್ಚರ್ಯವಾಗಿ ತೋರುತ್ತದೆ"** (ಕೀರ್ತ. 118). ಇದಕ್ಕಾಗಿ ನನ್ನ ಕರ್ತನಾದ ಯೇಸುಕ್ರಿಸ್ತನಿಗೆ ಕೋಟಿ ಕೋಟಿ ಸ್ತೋತ್ರವನ್ನು ಸಲ್ಲಿಸುತ್ತೇನೆ. ನನ್ನ ಸಾಕ್ಷಿಯ ಮೂಲಕ ಯೇಸುಕ್ರಿಸ್ತನಿಗೆ ಸಂಪೂರ್ಣ ಮಹಿಮೆಯಾಗಲಿ.

ಹಲ್ಲೆಲೂಯ ಕರ್ತನಿಗೆ ಸ್ತೋತ್ರ




**– ಶ್ವೇತಾ ಸುರೇಶ್**
ಕೇಜಾರು ಗ್ರಾಮ
ಪೇಜಾವಾರಾ ಪೋಸ್ಟ್,
ಕರೋಡಿ ಮನೆ,
ಬಜಪೆ – ಮಂಗಳೂರು – 574175.

ಯೆಹೋವನೇ ನಿನಗೆ ನಿತ್ಯಪ್ರಕಾಶವು, ನಿನ್ನ ದೇವರೇ ನಿನಗೆ ತೇಜಸ್ಸು.
(ಯೆಶಾ. 60:19).

## ಡಿಜಿಎಮ್ ಬೇತೇಲ್ ಅಂಕಣ

- ಸಹೋ॥ ಸಂದೀಪ್ ಹಾಗೂ ಸಹೋ॥ ಪ್ರೀತಾರವರಿಗೆ ದೇವರು ಹೆಣ್ಣು ಮಗುವನ್ನು ದಾನವಾಗಿ ಅನುಗ್ರಹಿಸಿದ್ದಾನೆ.
- ಸಹೋ॥ ಕೃಷ್ಣ ಹಾಗೂ ಸಹೋ॥ ಭವಾನಿಯವರಿಗೆ ದೇವರು ದಾನವಾಗಿ ಹೆಣ್ಣು ಮಗುವನ್ನು ದಯಪಾಲಿಸಿದ್ದಾನೆ.
- ಸಹೋ॥ ಸಂದೇಶ್ ಹಾಗೂ ಸಹೋ॥ ಸವಿತಾರವರಿಗೆ ದೇವರು ದಾನವಾಗಿ ಅನುಗ್ರಹಿಸಿದ ಹೆಣ್ಣು ಮಗುವಿಗೆ ಜಾನಿಸ್ ಸಿಯೋನ್ ಎಂದು ನಾಮಕರಣ ಮಾಡಿ ದೇವರಿಗೆ ಪ್ರತಿಷ್ಠಿಸಲಾಯಿತು.






ಅಂಬಲಪಾಡಿ ಲಯನ್ಸ್ ಕ್ಲಬ್ ವತಿಯಿಂದ ಸಮಾಜ ಸೇವೆಯ ನಿಮಿತ್ತ ಪಾ॥ ಸುನಿಲ್ ಜಾನ್ ಡಿ'ಸೋಜಾರವರನ್ನು ಸನ್ಮಾನಿಸಲಾಯಿತು.

ನಾನು ಯೆಹೋವನಲ್ಲಿ ಪರಮಾನಂದಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವದು
(ಯೆಶಾ. 61:10).

ಆರೋಗ್ಯ ಸ್ವರ

# ಗರ್ಭಿಣಿ ಸ್ತ್ರೀಯರಿಗಾಗಿ ವಿಶೇಷ ಪಾಕ ವೈವಿಧ್ಯ

ಗರ್ಭಿಣೀ ಅವಸ್ಥೆಯಲ್ಲಿ ಸ್ತ್ರೀಯರಿಗೆ 3ರಿಂದ 4ಸಾವಿರ ಕ್ಯಾಲೋರಿಗಳಷ್ಟು ಆಹಾರ ಸೇವನೆ ಅವಶ್ಯ. ಜೊತೆಗೆ ಆಹಾರವು ಪೌಷ್ಟಿಕವೂ, ರುಚಿಕರವೂ, ಸುಲಭವಾಗಿ ಪಚನವಾಗುವಂಥದ್ದೂ ಸಂತುಲಿತವೂ ಆಗಿರುವುದು ಅಗತ್ಯ. ಗರ್ಭಿಣಿ ಸ್ತ್ರೀಯರಿಗಾಗಿಯೇ ಸುಲಭ, ಸರಳ ವಿಧಾನಗಳಿಂದ ತಯಾರಿಸಬಹುದಾದ ಸ್ವಾದಭರಿತ, ಪೌಷ್ಟಿಕ, ಸಂತುಲಿತ ಆಹಾರದ ಕೆಲವು ವಿಶಿಷ್ಟ ಪಾಕ ವೈವಿಧ್ಯಗಳು ಇಂತಿವೆ!

ಪೌಷ್ಟಿಕ ಕಿಚಡಿ ಬೇಕಾಗುವ ಸಾಮಗ್ರಿ : ರವೆ ಅರ್ಧ ಕಪ್, ಓಟ್ಸ್ ಅರ್ಧ ಕಪ್, ಹಾಲು ಅರ್ಧ ಕಪ್, 3 ಚಮಚ ದ್ರಾಕ್ಷೆ, 2 ಚಮಚ ಬಾದಾಮಿಯ ತುಂಡುಗಳು, 3 ಚಮಚ ಬಾದಾಮಿಯ ತುಂಡುಗಳು, 3 ಚಮಚ ಸಕ್ಕರೆ, ಎರಡೂವರೆ ಕಪ್ ನೀರು.

ತಯಾರಿಸುವ ವಿಧಾನ : ಅಗಲ ಬಾಯಿಯ ಪಾತ್ರೆಯಲ್ಲಿ ನೀರನ್ನು ಹಾಕಿ ಕುದಿಸಬೇಕು. ಕುದಿಯುವ ನೀರಿಗೆ ಓಟ್ಸ್ ಹಾಗೂ ರವೆಯನ್ನು ಬೆರೆಸಿ, ಚೆನ್ನಾಗಿ ಕಲಸಬೇಕು. 5–7 ನಿಮಿಷ ಚೆನ್ನಾಗಿ ಬೆಂದ ಈ ಮಿಶ್ರಣಕ್ಕೆ ದ್ರಾಕ್ಷೆ ಹಾಗೂ ಬಾದಾಮಿಯ ತುಂಡುಗಳನ್ನು ಬೆರೆಸಬೇಕು. ಬಳಿಕ ಸಕ್ಕರೆ ಸೇರಿಸಬೇಕು. ನಂತರ ಹಾಲು ಸೇರಿಸಿ ಕುದಿಸಿದರೆ ರುಚಿಕರ ಪೌಷ್ಟಿಕ ಕಿಚಡಿ ತಯಾರು!.

ಮಿಕ್ಸೆಡ್ ಫ್ರುಟ್ ರಸಾಯನ ಗರ್ಭಿಣೀ ಅವಸ್ಥೆಯಲ್ಲಿ ಎಲ್ಲಾ ಕಾಲದಲ್ಲೂ ಹಣ್ಣುಗಳು ಉತ್ತಮ ಆಹಾರ. ಹಾಲು ಅಥವಾ ಕಾಯಿಹಾಲು ಬೆರೆಸಿ ವಿವಿಧ ಹಣ್ಣುಗಳ ರಸಾಯನ ತಯಾರಿಸಿ ಸೇವಿಸುವುದರಿಂದ ನಾಲಿಗೆಗೂ ರುಚಿಕರ, ದೇಹಮನಗಳಿಗೂ ಮುದಕರ.

ಬೇಕಾಗುವ ಸಾಮಗ್ರಿ : – ಸಕ್ಕರೆ, ಜೇನು, ಹಾಲು ಅಥವಾ ಕಾಯಿಹಾಲು, ಬಾಳೆಹಣ್ಣು, ಸೇಬು, ಸಪೋಟ, ಒಣದ್ರಾಕ್ಷೆ, ಹಸಿದ್ರಾಕ್ಷೆ, ಬಾದಾಮಿ, ಒಣ ಅಂಜೂರ, ಹಸಿಅಂಜೂರ, ದಾಳಿಂಬೆ.

ತಯಾರಿಸುವ ವಿಧಾನ : ಎಲ್ಲಾ ಒಣ ಹಣ್ಣು ಹಾಗೂ ತಾಜಾ ಹಣ್ಣುಗಳನ್ನು ಸಣ್ಣಗೆ ಹೆಚ್ಚಿ ಸಕ್ಕರೆ ರುಚಿಗೆ ತಕ್ಕಷ್ಟು ಬೆರೆಸಬೇಕು. ಬಳಿಕ ಒಂದು ಚಮಚ ಜೇನು ಸೇರಿಸಬೇಕು. ಇದಕ್ಕೆ ಕುದಿಸಿ ತಣಿಸಿದ ಹಾಲು ಅಥವಾ ಕಾಯಿತುರಿಯನ್ನು ರುಬ್ಬಿ, ಹಿಂಡಿ ತಯಾರಿಸಿದ ಕಾಯಿಹಾಲನ್ನು ಸೇರಿಸಬೇಕು. ಸಾಮಾನ್ಯವಾಗಿ ಉಷ್ಣದೇಹ ಪ್ರಕೃತಿಯ ಗರ್ಭಿಣಿ ಸ್ತ್ರೀಯರಿಗೆ ಕಾಯಿಹಾಲು ಬೆರೆಸಿ ಈ ರಸಾಯನ ಮಾಡಿದರೆ ಹಿತಕರ.

– ಸಂಗ್ರಹ.

---

## ಪ್ರಾರ್ಥನಾ ಮನವಿಗಳು

- **ಕರ್ನಾಟಕದ 30 ಜಿಲ್ಲೆಗಾಗಿ ಪ್ರಾರ್ಥಿಸಿರಿ.**
- **ಭಾರತ ದೇಶಕ್ಕಾಗಿ ಪ್ರಾರ್ಥಿಸಿರಿ.**
- **ಭಾರತ ದೇಶದಲ್ಲಿರುವ ಎಲ್ಲಾ ಅಧಿಕಾರಿಗಳಿಗಾಗಿ ಪ್ರಾರ್ಥಿಸಿರಿ.**
- **ನಮ್ಮ ದೇವರ ಸ್ವರ ಮಾಸ ಪತ್ರಿಕೆಯನ್ನು ದೇವರು ಆಶೀರ್ವದಿಸಿ ವಿಶಾಲತೆಗೆ ನಡೆಸುವಂತೆ ಪ್ರಾರ್ಥಿಸಿರಿ.**
- **ದೇಶದಲ್ಲಿ ಸೇವೆ ಮಾಡುತ್ತಿರುವ ಪ್ರತಿಯೊಂದು ಸೇವಕರುಗಳಿಗಾಗಿ, ಕುಟುಂಬಗಳಿಗಾಗಿ, ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿರಿ.**

ಯೆಹೋವನ ಯಾಜಕರೆಂಬ ಬಿರುದನ್ನು ಹೊಂದುವಿರಿ, ಜನರು ನಿಮ್ಮನ್ನು ನಮ್ಮ ದೇವರ ಸೇವಕರು ಎಂದು ಕರೆಯುವರು (ಯೆಶಾ. 61: 6).

सकाळ www.esakal.com
कोल्हापूर । सोमवार, ८ ऑक्टोबर २०१२ । किंमत ₹ तीन
* आजचा अंक : पाने १४ (१०+४)

# कल्याणी २७ वर्षांनी परतते तेव्हा...

## भावासह कुटुंबाचे डोळे आनंदाने पाणावले

पराग गावकर : सकाळ वृत्तसेवा


कल्याणी नाईक

कळणे, ता. ७ : मानसोपचारासाठी मुंबईला गेलेली आणि तेथेच बेपत्ता झालेली कल्याणी तब्बल २७ वर्षांनी घरी परतली आणि सर्वांनाच आश्चर्याचा धक्का बसला. घरच्यांनीही तिला मायेने जवळ केले. कल्याणीच्या आयुष्यातील सत्तावीस वर्षांचे पर्व एखाद्या चित्रपटाला शोभेल असेच आहे.

कल्याणी वासुदेव नाईक मूळची वायंगणतडची. लग्नानंतर त्यांना मानसिक धक्का बसला. प्राथमिक उपचार करूनही त्यांच्यात सुधारणा होईना. त्यामुळे वडिलांनी त्यांना १९८३-८४ च्या दरम्यान उपचारासाठी मुंबईत नेले. त्यांच्यावर एका मानसोपचारतज्ज्ञाकडे उपचार सुरू करण्यात आले. शॉक ट्रिटमेंट देण्यासंबंधीची चर्चा झाली. ती चर्चा ऐकून ती घाबरली आणि घरातून निघून गेली. नातेवाइकांनी तिचा खूप शोध घेतला; परंतु शोध लागला नाही. तिच्या वाटेकडे डोळे लावून बसलेल्या कुटुंबाच्या डोळ्यांतील आसवेही कोरडी झाली. तिच्या परतण्याच्या वाटेकडे डोळे लावून बसलेल्या वडिलांचे तिला न बघताच निधन झाले. त्यामुळे ती पुन्हा परतेल याची आशा सर्वांनीच सोडून दिली आणि अचानक १२ सप्टेंबरला त्यांच्या कुटुंबीयांना दोडामार्ग पोलिस ठाण्यातून निरोप आला. लहान भाऊ भगवान नाईक पोलिस ठाण्यात गेला. तिथे पन्नाशीच्या आसपास असलेली, केस कापलेली आणि निस्तेज चेहऱ्याची महिला होती. त्यांच्यासोबत आणखी काही मंडळी होती. त्या मंडळींनी व पोलिसांनी भगवान यांना कल्याणी ही तुझी बहीण आहे का, असे विचारले. क...

पान...

### मदतीसाठी पुढाकार

जिल्हा परिषद सदस्य व शिवसेना जिल्हाप्रमुख एकनाथ नाडकर्णी यांनी आज नाईक कुटुंबीयांची भेट घेतली. कल्याणी यांच्या औषधोपचारासाठी तसेच जगण्यासाठी आर्थिक मदत लागेल, ती शासनाकडून व अन्य दानशुरांकडून मिळवून देण्याचे आश्वासन दिले. बहिणीला स्वीकारण्याचे धाडस दाखविलेल्या भगवानचेही कौतुक केले. या वेळी संजय गवस, प्रवीण गावकर, वायंगणतडचे विभाग उपप्रमुख कृष्णा गावडे, शाखाप्रमुख शिवराम नाईक, संजय विर्नोडकर, रमाकांत देसाई आदी उपस्थित होते.

# कल्याणी २७ वर्षांनी परतते तेव्हा...

» पान १ वरून

हरविली, तेव्हा भगवान अवघा चार वर्षांचा होता; पण तरीही ती हरविल्याची गोष्ट त्याला माहिती होती. चेहरा मात्र ओळखीचा नव्हता. शिवाय कल्याणी यांनाही भगवानची ओळख नव्हती. तरीही त्याला ऐकून माहिती असलेल्या बहिणीला त्याने ओळखले; मग पोलिसांनी व कल्याणी यांना घेऊन आलेल्या मंडळींनी कल्याणी यांचे वायंगणतड येथील घर गाठले. तब्बल सत्तावीस वर्षांनी कल्याणी आपल्या घरी परतली.

उपचारामुळे बऱ्यापैकी सुधारलेल्या कल्याणी यांच्याकडूनच त्यांच्या सत्तावीस वर्षांच्या अज्ञातवासाची कथा समजली. मुंबईतून घराबाहेर पडलेल्या कल्याणी रेल्वेतून गुजरातमध्ये पोहोचल्या. तेथे काही दिवस राहिल्यानंतर त्या घराच्या ओढीने पुन्हा रेल्वेत बसल्या; मात्र त्या वेळी कोकण रेल्वेचे ट्रॅकही निर्माण झालेले नव्हते. त्यामुळे रेल्वे कोकणात येण्याची शक्यता नव्हती. त्यामुळे आधीच मनोरुग्ण व त्यात अज्ञान, यामुळे त्या कर्नाटकात पोहोचल्या. तेथे गेल्यावर त्या गोंधळून गेल्या. पोटाची खळगी भरण्यासाठी त्यांनी मग रेल्वेस्थानकावरच भीक मागायला सुरवात केली. भीक मागून रेल्वेस्थानकालाच आपले आश्रयस्थान बनवून त्या राहू लागल्या. १४ डिसेंबर २००९ ला त्यांना 'होम ऑफ फेथ ऑरफेनेज'मध्ये दाखल केले. डिवायन जनरेशन मिनिस्टरीज बेथल चर्च ट्रस्ट'कडून उडपी जिल्ह्यातील येसुपुरा येथे हा अनाथाश्रम चालविला जातो. अनाथ आश्रमात कल्याणी दाखल झाली, तेव्हा एक मनोरुग्ण अशी त्यांची ओळख होती. तेथे त्यांच्यावर उपचार करण्यात आले. उपचारामुळे त्यांच्यात सुधारणा झाली. त्यांच्या गतस्मृती जाग्या झाल्या. आपल्या कुटुंबीयांच्या आठवणीने त्या व्याकुळ झाल्या. आपल्या घरी परतण्यासाठी त्यांनी संस्थेच्या कार्यकर्त्यांकडे आग्रह धरला. त्यांना आपल्या गावाचे नाव, सावंतवाडी तालुका आणि रत्नागिरीचा संदर्भ दिला. या पत्त्याच्या आधारे संस्थेच्या कार्यकर्त्यांनी त्यांना सिंधुदुर्गात आणले. त्यानंतर तिला घेऊन संस्थेचे कार्यकर्ते १२ सप्टेंबरला दोडामार्ग पोलिस ठाण्यात आले. त्यांचा भाऊ भगवानच्या ताब्यात दिले.

मनोरुग्ण अवस्थेत हरवलेल्या आणि सत्तावीस वर्षांनी परतलेल्या आपल्या बहिणीला भगवानने अत्यानंदाने ताब्यात घेतले. इतक्या वर्षांनंतर टिकलेले हे प्रेम पाहून संस्थेचे कार्यकर्तेही हरखून गेले. बांधकाम मजूर असलेला आणि हातावर पोट घेऊन चार मुले, पत्नी असा संसार सांभाळणारा भगवान एका क्षणात अनेकांच्या कौतुकाचा विषय झाला. कारण मनोरुग्णांच्या बाबतीत त्यांचे कुटुंबीयही फारशी आस्था दाखवित नाहीत. बऱ्याचदा हरवलेले मनोरुग्ण जेव्हा बरे होऊन घरी परततात, तेव्हा त्यांना ओळखण्याचेही सौजन्य त्यांच्याच रक्ताचे नातेवाईक दाखवित नाहीत. अशावेळी भगवानने आपल्या बहिणीला स्वीकारले. शिवाय त्यांची पत्नी भाग्यश्री यांनीही आपुलकीने नवऱ्याला साथ दिली. कल्याणी परतल्याने घरचा हरवलेला एक आनंद घरी परतल्याचे वातावरण नाईकांच्या घरी आहे. त्यांच्या औषधोपचाराकडे कुटुंबीय आज आस्थेने लक्ष देत आहे.

### मदतीची गरज

कल्याणी यांच्यावर अद्यापही उपचार सुरू आहेत. आज त्यांच्या उपचाराची पूर्ण जबाबदारी भावावर आहे. समाजानेही मनोरुग्णांविषयी आदरभाव जोपासण्यासाठी त्यांना मदत करण्याची गरज आहे.

ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ
(2 ಕೊರಿ. 12:9).







ನಮ್ಮೂರ ಸಸ್ಯ ನಮಗಾಗಿ ಮತ್ತು ಏಡ್ಸ್ ಜನಜಾಗೃತಿ ಮತ್ತು ತಡೆಗಟ್ಟುವಿಕೆ ಮಾಹಿತಿ ಶಿಬಿರವನ್ನು ದಿನಾಂಕ 13–11–12 ರಂದು ವಿಶ್ವಾಸದಮನೆ ಅನಾಥಾಶ್ರಮದಲ್ಲಿ ನಡೆಸಲಾಯಿತು. ಶ್ರೀ ಸುರೇಶ್ ಶೆಟ್ಟಿ, ಗುರ್ಮೆ (ಉದ್ಯಮಿ, ಬಳ್ಳಾರಿ) ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಎನ್.ಟಿ. ಅಂಚನ್ (ಆಡಳಿತ ನಿರ್ದೇಶಕರು, ಅಂಚನ್ ಆಯುರ್ವೇದಿಕ್ ಇಂಡಸ್ಟ್ರಿ, ಪಡುಬಿದ್ರಿ) ರವರು ಸಸ್ಯಗಳ ಬಗ್ಗೆ, ಶ್ರೀ ಬ್ರಯಾನ್ ಡಯಾಸ್ (ಸಮಾಜ ಸೇವಕರು)ರವರು ಏಡ್ಸ್ ಜನಜಾಗೃತಿ ಮತ್ತು ತಡೆಗಟ್ಟುವಿಕೆ ಬಗ್ಗೆ ನೆರೆದು ಬಂದ ಸಾರ್ವಜನಿಕರಿಗೆ ಸವಿಸ್ತಾರವಾದ ಮಾಹಿತಿಯನ್ನು ನೀಡಿದರು. ಇದರಲ್ಲಿ ಶ್ರೀ ದೇವಿಪ್ರಸಾದ್ ಶೆಟ್ಟಿ (ಜೆಲ್ಲಾಧ್ಯಕ್ಷರು, ಜೆಡಿಎಸ್, ಉಡುಪಿ ಜಿಲ್ಲೆ), ಶ್ರೀಮತಿ ಪ್ರೆಸಿಲ್ಲಾ ಡಿಮೆಲ್ಲೊ (ಸದಸ್ಯರು ತಾಲೂಕು ಪಂಚಾಯತ್, ಉಡುಪಿ), ಶ್ರೀಮತಿ ವಸಂತಿ ಆಚಾರ್ಯ (ಅಧ್ಯಕ್ಷರು, ಗ್ರಾಮ ಪಂಚಾಯತ್, ಇನ್ನಂಜೆ), ಶ್ರೀ ಪಾ॥ ಇ. ಡಬ್ಲ್ಯೂ, ಫ್ರಾಂಕ್ (ಅಧ್ಯಕ್ಷರು, ಪಾಸ್ಟರ್ ಅಸೋಸಿಯೇಶನ್, ಉಡುಪಿ), ಶ್ರೀ ಲೀಲಾಧರ್ ಶೆಟ್ಟಿ ಕರಂದಾಡಿ (ಸಮಾಜ ಸೇವಕರು, ಕಾಪು), ಶ್ರೀ ಮುಸ್ತಾಫ (ಉದ್ಯಮಿ, ಕಾಪು), ಶ್ರೀ ಜಯಕರ್ ಪೂಜಾರಿ (ಸದಸ್ಯರು, ಗ್ರಾಮ ಪಂಚಾಯತ್, ಇನ್ನಂಜೆ), ಶ್ರೀ ಹೆನ್ರಿ ಕಸ್ತಲಿನೊ (ಅಧ್ಯಕ್ಷರು, ರೋಟರಿ ಕ್ಲಬ್, ಶಂಕರಪುರ), ಶ್ರೀ ಪಾ॥ ಜೋಸೆಫ್ ಜಮಖಂಡಿ (ಉಪಾಧ್ಯಕ್ಷರು, ಪಾಸ್ಟರ್ ಅಸೋಸಿಯೇಶನ್, ಉಡುಪಿ), ಶ್ರೀ ಮಧ್ವರಾಜ್ ಸುವರ್ಣ (ಸಂಸ್ಥಾಪಕರು, ಶ್ರೀ ನಾರಾಯಣಗುರು ಸ್ವ ಉದ್ಯೋಗ ತರಬೇತಿ ಕೇಂದ್ರ, ಪಡುಬಿದ್ರಿ) ಮೊದಲಾದವರು ಉಪಸ್ಥಿತರಿದ್ದರು.



ಸಹೋ॥ ಸಂದೇಶ್ ಹಾಗೂ ಸಹೋ॥ ಸವಿತಾರವರಿಗೆ ದೇವರು ದಾನವಾಗಿ ಅನುಗ್ರಹಿಸಿದ ಹೆಣ್ಣು ಮಗುವಿಗೆ ಜಾನಿಸ್ ಸಿಯೋನ್ ಎಂದು ನಾಮಕರಣ ಮಾಡಿ ದೇವರಿಗೆ ಪ್ರತಿಷ್ಠಿಸಲಾಯಿತು.

ಯೇಸುಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ (2 ಕೊರಿ. 13:14).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

**ತಿಳುವಳಿಕೆಯ ಸ್ವರ**

# ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಸತ್ಯವೇದವು ದೇವರಿಂದ ಪ್ರಾರಂಭಿಸಲ್ಪಟ್ಟ ಪುಸ್ತಕವೆಂಬುದಕ್ಕೆ ಅದರ ಅಸಮಾನತೆಯು ಒಂದು ಆಧಾರವಾಗಿದೆ. "ಬೈಬಲ್" ಎಂಬ ಶಬ್ದವು ಗ್ರೀಕ್ ಶಬ್ದದ "ಬಿಬ್ಲೋಸ್" ಎಂಬವದರಿಂದ ಉಂಟಾಗಿದೆ. "ಬಿಬ್ಲೋಸ್" ಎಂದರೆ "ಪುಸ್ತಕ" ಅಥವಾ "ಸುರಳಿ" ಚರಿತ್ರೆ, ಪದ್ಯ, ನಾಟಕ, ಆತ್ಮಚರಿತ್ರೆ, ಪ್ರವಾದನೆ, ತತ್ವಜ್ಞಾನ, ವಿಜ್ಞಾನ ಮತ್ತು ಆತ್ಮಪ್ರೇರಿತವಾದ ಮಾತುಗಳಿಂದ ಕೂಡಿರುವ ಭಾಷಾಜ್ಞಾನದ ಸರಣಿಯಿಂದ ಆವರಿಸಲ್ಪಟ್ಟ ಪುಸ್ತಕಗಳ ಸಮುಚ್ಚಯ ಬೈಬಲ್ ಆಗಿದೆ. ಇಡೀ ಬೈಬಲನ್ನು ಅಥವಾ ಅದರ ಕೆಲವು ಭಾಗಗಳನ್ನು 2212 ಭಾಷೆಗಳಿಗೆ ಭಾಷಾಂತರಿಸಲಾಗಿದೆ. ಇತರ ಯಾವುದೇ ಪುಸ್ತಕಗಳಿಗಿಂತ ಪ್ರತಿ ವರ್ಷ ಮಿಲಿಯಗಟ್ಟಳೆಗಿಂತಲೂ ಹೆಚ್ಚಾಗಿ ಬೈಬಲು ಮಾರಾಟವಾಗುತ್ತದೆ.

ಸತ್ಯವೇದವು ಇತರ ಪುಸ್ತಕಗಳಿಗಿಂತ ಭಿನ್ನವಾಗಿರಲು ಕಾರಣವೇನೆಂದರೆ ಇದು ವಿವಿಧ ಪುಸ್ತಕಗಳ ಹೊಂದಾಣಿಕೆಯನ್ನು ಒಳಗೊಂಡಿದೆ. ನಲ್ವತ್ತಕ್ಕಿಂತಲೂ ಹೆಚ್ಚಿನ ವಿವಿಧ ಗ್ರಂಥಕರ್ತರಿಂದ 1500 ವರ್ಷಗಳ ಅವಧಿಯ ಚರಿತ್ರೆಯು ಬರೆಯಲ್ಪಟ್ಟ ಗ್ರಂಥವು ಬೈಬಲ್ ಆಗಿರುವುದು. ಈ ಗ್ರಂಥಕರ್ತರು ವಿವಿಧ ಹಿನ್ನೆಲೆಯುಳ್ಳವರು. ಯೆಹೋಶುವನು ಒಬ್ಬ ಸೇನಾಧಿಕಾರಿ, ದಾನಿಯೇಲನು ಪ್ರಧಾನಮಂತ್ರಿ, ಸಮುವೇಲನು ಒಬ್ಬ ನ್ಯಾಯಾಧಿಪತಿ, ಎಜ್ರನು ಒಬ್ಬ ಯಾಜಕನು ಇನ್ನು ಇತರರು ಬೇರೆ ಬೇರೆ ಉದ್ಯೋಗಸ್ಥರಾಗಿದ್ದರು. ಹೊಸ ಒಡಂಬಡಿಕೆಯ ಗ್ರಂಥಕರ್ತರಲ್ಲಿ ಒಬ್ಬನು ಸುಂಕ ವಸೂಲು ಮಾಡುವವನು, ಒಬ್ಬನು ವೈದ್ಯನು, ಒಬ್ಬನು ಗುಡಾರ ಕೆಲಸಮಾಡುವವನು, ಬೆಸ್ತರು ಮತ್ತು ಬಡಗಿಗಳು ಸೇರಿದ್ದರು. ಕೆಲವು ಬರವಣಿಗೆಗಾರರು ಮೋಶೆ, ಯೆಶಾಯ ಮತ್ತು ಪೌಲರಂತೆ ಹೆಚ್ಚಿನ ಪಾಂಡಿತ್ಯವುಳ್ಳವರಾಗಿದ್ದರು. ಕೆಲವರು ಅವಿದ್ಯಾವಂತರಾಗಿದ್ದರು. ಕೆಲವು ಪುಸ್ತಕಗಳು ಬೇರೆ ಬೇರೆ ಸ್ಥಳಗಳಲ್ಲಿ ಬರೆಯಲ್ಪಟ್ಟವುಗಳಾಗಿದ್ದವು. ಅರಣ್ಯದಲ್ಲಿ (ಮೋಶೆ), ಸೆರೆಮನೆಯಲ್ಲಿ (ಪೌಲನು) ಮತ್ತು ಗಡಿಪಾರಾಗಿ (ಯೋಹಾನನು).

(ಆಫ್ರಿಕಾ, ಏಷ್ಯಾ ಮತ್ತು ಯುರೋಪು) ಈ ಮೂರು ವಿವಿಧ ಭೂಖಂಡಗಳಲ್ಲಿ ಬೈಬಲು ತಯಾರಿಸಲ್ಪಟ್ಟು (ಇಬ್ರಿಯ, ಅರಮಾಯ ಮತ್ತು ಗ್ರೀಕ್) ಈ ಮೂರು ಭಾಷೆಗಳಲ್ಲಿ ಬರೆಯಲ್ಪಟ್ಟಿದೆ.

ಇಷ್ಟೆಲ್ಲಾ ವ್ಯತ್ಯಾಸಗಳಿದ್ದರೂ ಬೈಬಲ್ ವಿಶೇಷವಾದ ಐಕ್ಯತೆಯನ್ನು ಪ್ರದರ್ಶಿಸುತ್ತದೆ. ಇದರಲ್ಲಿ ವಿಶೇಷವಾದ ಅನ್ಯೋನ್ಯತೆ, ಸಂಪೂರ್ಣತೆ, ಮತ್ತು ಪರಿಪೂರ್ಣವಾದ ಹೊಂದಾಣಿಕೆ ಇದ್ದು ಇದು ಆಕಸ್ಮಿಕವಾದ ಮಿಲನ ಅಥವಾ ಒಂದಾಗುವಿಕೆ ಎಂದು ವಿವರಿಸಲಾಗುವುದಿಲ್ಲ. ಬೈಬಲ್ ಒಂದು ಸಂಪೂರ್ಣವಾದ ಪುಸ್ತಕ. ಜಗತ್ತಿನ ಇತರ ಯಾವ ಪುಸ್ತಕಗಳೂ ಬೈಬಲಿಗೆ ಸರಿಸಾಟಿಯಾಗುವುದಿಲ್ಲ. "ಇಂಗ್ಲೆಂಡು ದೇಶಕ್ಕೆ ಎರಡು ಪುಸ್ತಕಗಳಿವೆ, ಒಂದು ಸತ್ಯವೇದ ಮತ್ತೊಂದು ಶೇಕ್ಸ್‌ಪಿಯರ್ ಪುಸ್ತಕ. ಇಂಗ್ಲೆಂಡು ಶೇಕ್ಸ್‌ಪಿಯರನನ್ನು ತಯಾರಿಸಿತು ಆದರೆ ಬೈಬಲ್ ಇಂಗ್ಲೆಂಡನ್ನು ತಯಾರಿಸಿತು" ಎಂದು ವಿಕ್ಟರ್ ಹ್ಯೂಗೊ ಹೇಳಿರುವರು.

ದೇವರ ಪ್ರೀತಿಯು ಪ್ರಕಟವಾದ ಬೈಬಲಿಗೆ ನಮ್ಮ ಪ್ರತಿಕ್ರಿಯೆಯು ಬೇಕಾಗಿದೆ. ಇದರ ಸಂದೇಶವು ಒಬ್ಬ ವ್ಯಕ್ತಿಯ ಜೀವಿತವನ್ನು ಕ್ಷಣಮಾತ್ರದಲ್ಲಿ ಪರಿವರ್ತಿಸುವುದು ಮತ್ತು ಎಲ್ಲಾ ಜೀವಿಗಳಿಗೂ ಎಲ್ಲಾ ಸಂಸ್ಕೃತಿಗಳಿಗೂ ಅನ್ವಯವಾಗುವುದು. "ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದೂ, ಪ್ರಾಣ ಆತ್ಮಗಳನ್ನು ಕೀಲು ಮಜ್ಜೆಗಳನ್ನು ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನು ವಿವೇಚಿಸುವಂಥದೂ ಆಗಿದೆ" (ಇಬ್ರಿ. 4:12). ಸಮಸ್ತ ಲೋಕದ ಜನರು ಈ ಪುಸ್ತಕದ ಪುಟಗಳಿಂದ ಆದರಣೆ, ಜ್ಞಾನ ಮತ್ತು ನಡೆಸುವಿಕೆಯನ್ನು ಬಯಸುತ್ತಾರೆ. ಪ್ರಸಿದ್ಧಿ ಹೊಂದಿದ ದೈವ ಶಾಸ್ತ್ರಜ್ಞರಾದ ಡಾ॥ ವಿಲ್ಬರ್. ಯಂ. ಸ್ಮಿತ್‌ರವರು ಸತ್ಯವೇದಾಭ್ಯಾಸ ಮಾಡುವುದರಿಂದ ಏಳು ಮಹತ್ತರವಾದ ವಿಷಯಗಳನ್ನು ಹೊಂದಿಕೊಳ್ಳಬಹುದೆಂದು ಪಟ್ಟಿ ಮಾಡಿರುವರು.

1. ಸತ್ಯವೇದವು ಪಾಪವನ್ನು ಕಂಡುಹಿಡಿಯುವುದು ಮತ್ತು ತಿಳಿಸುವುದು.
2. ಸತ್ಯವೇದವು ನಮ್ಮನ್ನು ಪಾಪದ ಮಲೀನತ್ವದಿಂದ ಶುದ್ಧ ಮಾಡುವುದು.
3. ಸತ್ಯವೇದವು ನಮಗೆ ಶಕ್ತಿಯನ್ನು ಒದಗಿಸುವುದು.

ನಿಮ್ಮ ಹೃದಯವನ್ನೂ ಸ್ವಭಾವವನ್ನೂ ನೂತನಮಾಡಿಕೊಳ್ಳಿರಿ

(ಯೆಹೆ. 31).

4. ಸತ್ಯವೇದವು ನಾವು ಏನೇನನ್ನು ಮಾಡಬೇಕೆಂದು ಬೋಧಿಸುವುದು.
5. ಸತ್ಯವೇದವು ನಮಗೆ ಪಾಪವನ್ನು ಜಯಿಸಲು ಖಡ್ಗವನ್ನು ಒದಗಿಸಿಕೊಡುವುದು.
6. ಸತ್ಯವೇದವು ನಮ್ಮ ಜೀವಿತವನ್ನು ಫಲದಾಯಕವಾಗಿ ಮಾಡುವುದು.
7. ಸತ್ಯವೇದವು ನಮಗೆ ಪ್ರಾರ್ಥನೆ ಮಾಡಲು ಬಲಕೊಡುವುದು.

ಸತ್ಯವೇದವನ್ನು ಅಭ್ಯಸಿಸಲು ನೀನು ಈ ವರೆಗೂ ಪ್ರಾರಂಭಿಸದಿದ್ದರೆ ಇಂದಿನಿಂದಲೇ ಅದನ್ನು ಅಭ್ಯಾಸಿಸಲು ಪ್ರಾರಂಭಿಸು. ನಿಜವಾಗಿಯೂ ಇದು ಒಂದು ಅತ್ಯುತ್ತಮವಾದ ಅಭ್ಯಾಸವೆಂದು ತಿಳಿ. ಸತ್ಯವೇದವನ್ನು ಓದುವುದು ಇತರ ಪುಸ್ತಕಗಳನ್ನು ಓದಿದಂತೆ ಎಂದು ತಿಳಿಯಬೇಡ. ಸತ್ಯವೇದವನ್ನು ನೀನು ಯಥಾರ್ಥವಾಗಿ ಓದುವುದರಿಂದ ನೀನು ಮತ್ತು ನಿನ್ನ ನಿರ್ಮಾಣಿಕನಾದ ದೇವರೊಂದಿಗೆ ಎರಡು ವಿಧವಾದ ಸಂಪರ್ಕವನ್ನು ಹೊಂದಿಕೊಳ್ಳುವಿ ಎಂದು ನೀನು ಕಂಡುಕೊಳ್ಳುವಿ.

ನೀನು ಸಂದಿಗ್ಧ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ನಿನಗೆ ಸತ್ಯವೇದವು ಮಾರ್ಗದರ್ಶನವನ್ನೀಯುವುದು. ಇತರರೊಂದಿಗೆ ಹಂಚಿಕೊಳ್ಳಲಾಗದಂಥ ಸಮಸ್ಯೆಗಳ ಪರಿಹಾರವನ್ನು ಸತ್ಯವೇದವು ಪರಿಹರಿಸುವುದು. ನೀನು ಒಬ್ಬ ಒಳ್ಳೆಯ ಮಾನವನಾಗುವಂತೆ ನಿನ್ನನ್ನು ಸ್ಫೂರ್ತಿಗೊಳಿಸುವುದು ಮತ್ತು ಉತ್ತೇಜನ ಪಡಿಸುವುದು. ನೀನು ಕಠಿಣವಾದ ಸಂಕಷ್ಟಕ್ಕೊಳಗಾದಾಗ ಅದನ್ನು ಎದುರಿಸಲು ಬಲವನ್ನು ಕೊಡುವುದು. ಎಲ್ಲಾ ವಿಷಯಗಳಲ್ಲಿ ನಿನಗೆ ವಿಶೇಷವಾದ ಮತ್ತು ಪರಿಪಕ್ವವಾದ ಅನುಭವವನ್ನು ಒದಗಿಸುವ ಸತ್ಯವೇದವನ್ನು ಅಭ್ಯಾಸಿಸಲು ಮರೆಯಬೇಡ.

ದೇವರು ನಿನ್ನ ಪ್ರಯತ್ನವನ್ನು ಆಶೀರ್ವದಿಸಲಿ.

ಮುಂದುವರಿಯುವುದು....

**ಸಹೋ। ಎಲಿಜಬೆತ್ ಡಿ'ಸೋಜಾ**

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಕನ್ನಡ ಶಾಲೆಗೆ ಅಭಯ ರಾಜ್ಯದಲ್ಲಿರುವ ಸರಕಾರಿ ಮತ್ತು ಕನ್ನಡ ಶಾಲೆಗಳನ್ನು ಯಾವುದೇ ಕಾರಣಕ್ಕೂ ಮುಚ್ಚುವ ಪ್ರಶ್ನೆಯೇ ಇಲ್ಲ. ಅವಶ್ಯವಿದ್ದರೆ ಸರಕಾರ ಹೊಸ ಶಾಲೆ ತೆರೆಯಲು ಬದ್ಧವಿದೆ ಎಂದು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಹೇಳಿದರು.
- ವಿಶ್ವ ಮಧುಮೇಹಿಗಳ ದಿನಾಚರಣೆಯಂದು ಭಾರತೀಯರಿಗೊಂದು ಕಹಿ ಸುದ್ದಿ ಕಾದಿದೆ. ಏಷ್ಯಾದಲ್ಲೇ ಅತಿ ಹೆಚ್ಚು ಮಧುಮೇಹ ರೋಗಿಗಳಿದ್ದಾರೆ, ಅಲ್ಲದೆ ವಿಶ್ವದಲ್ಲೇ ಅತಿ ಹೆಚ್ಚು ಮಧುಮೇಹಿಗಳನ್ನ ಹೊಂದಿರುವ ಐದು ದೇಶಗಳ ಪಟ್ಟಿಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಹೆಚ್ಒ) ತಯಾರಿಸಿರುವ ಅಂಕಿ ಅಂಶದ ಆಧಾರದ ಮೇರೆಗೆ ವಿಶ್ವ ಮಧುಮೇಹಿಗಳ ದಿನಾಚರಣೆಯ ಆಯೋಜಕರು ತಿಳಿಸಿದ್ದಾರೆ.
- 400 ವರ್ಷ ಹಿಂದಿನ ಗೋಲ್ಕೊಂಡಾ ವಜ್ರ ರೂ 117 ಕೋಟಿಗೆ ಹರಾಜು ಭಾರತದ ಆಂಧ್ರಪ್ರದೇಶ ಮೂಲದ ಪ್ರಸಿದ್ಧ ಗೋಲ್ಕೊಂಡಾ ವಜ್ರ ಲಂಡನ್ ಜಿನಿವಾದಲ್ಲಿ 117.80 ಕೋಟಿ ರೂ. ದಾಖಲೆ ಮೊತ್ತಕ್ಕೆ ಹರಾಜಾಗಿದೆ. ಸ್ಫಟಿಕದಷ್ಟು ಸ್ಪಷ್ಟವಾಗಿ ಫಳಫಳನೆ ಹೊಳೆಯುತ್ತಿರುವ 76 ಕ್ಯಾರಟ್‌ನ ಈ ವಜ್ರ ಸುಮಾರು 400 ವರ್ಷಗಳಷ್ಟು ಹಳೆಯದಾಗಿದ್ದು, ಇದರ ಮೂಲ ಪ್ರಸಿದ್ಧವಾದ ಕೊಹಿನೂರ್ ಹಾಗೂ ಬ್ಲೂ ಹಾಪ್ ವಜ್ರ ದೊರೆತ ಸ್ಥಳವಾಗಿದೆ ಎಂದು ಹರಾಜು ಪ್ರಕ್ರಿಯೆ ನಡೆಸಿದೆ ಕ್ರಿಸ್ಟೀಸ್ ತಿಳಿಸಿದೆ.
- ಶ್ರೀಲಂಕಾ ತಮಿಳರಿಗೆ 2,500 ಮನೆ ನಿರ್ಮಾಣ ರಾಜ್ಯದ ವಿವಿಧ ನಿರಾಶ್ರಿತ ಶಿಬಿರಗಳಲ್ಲಿ ಆಶ್ರಯ ಪಡೆದಿರುವ ಶ್ರೀಲಂಕಾ ತಮಿಳರಿಗೆ 2,500 ಮನೆಗಳನ್ನು ನಿರ್ಮಿಸಿಕೊಡುವುದಾಗಿ ತಮಿಳುನಾಡು ಸರ್ಕಾರ ಪ್ರಕಟಿಸಿದೆ.
- ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಅವರ ಪೂರ್ತಿ ಷುಗುರ್ ಹಾಗೂ ಪವರ್ ಲಿಮಿಟೆಡ್ ಕಂಪೆನಿಯಲ್ಲಿ ಮಾಡಲಾದ ಹೂಡಿಕೆಗಳಲ್ಲಿ ಅಕ್ರಮಗಳು ಕಂಡು ಬಂದಿಲ್ಲ ಎಂದಿರುವ ಆರ್ ಎಸ್ ಎಸ್ ಚಿಂತಕ, ಲೆಕ್ಕ ಪರಿಶೋಧಕ ಎಸ್ ಗುರುಮೂರ್ತಿ, ಈ ವಿವಾದಕ್ಕೆ ಮಾಧ್ಯಮಗಳು ರಾಜಕೀಯ ಬಣ್ಣ ಬಳಿಯುತ್ತಿವೆ ಎಂದು ದೂರಿದ್ದಾರೆ.

ನನ್ನ ಪರಿಶುದ್ಧವಾದ ಬೆಟ್ಟದಲ್ಲಿ, ಇಸ್ರಾಯೇಲಿನ ಪರ್ವತಾಗ್ರದಲ್ಲಿ ನನ್ನನ್ನು ಸೇವಿಸುವರು;
ಅಲ್ಲೇ ಅವರಿಗೆ ಪ್ರಸನ್ನನಾಗುವೆನು (ಯೆಹೆ. 20:40).

## ಮಹಿಳೆಯರ ಸ್ವರ

# ರೂತಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ದಾವೀದನು ತಾನು ಯಾವ ಪರಿಸ್ಥಿತಿಯಿಂದ ಮೇಲಕ್ಕೆ ಬಂದನೆಂಬುದನ್ನು ಅರಿತಿದ್ದನು. ತನ್ನ ಜೀವಿತದಲ್ಲಿ ಪ್ರಥಮ ಸ್ಥಾನವನ್ನು ದೇವರಿಗೆ ಕೊಡುತ್ತಿದ್ದನು. **“ಯೆಹೋವನು ಹೀಗೆ ತನ್ನ ಮಂಜೂಷದ ದೆಸೆಯಿಂದ ಓಬೇದೆದೋಮನನ್ನೂ ಅವನಿಗಿರುವದೆಲ್ಲವನ್ನೂ ಆಶೀರ್ವದಿಸಿದ್ದಾನೆಂಬ ವರ್ತಮಾನವು ದಾವೀದನಿಗೆ ಮುಟ್ಟಿದಾಗ ಅವನು ಹೋಗಿ ಓಬೇದೆದೋಮನ ಮನೆಯಲ್ಲಿದ್ದ ದೇವರ ಮಂಜೂಷವನ್ನು ಉತ್ಸವದಿಂದ ದಾವೀದನಗರಕ್ಕೆ ತಂದನು ಯೆಹೋವನ ಮಂಜೂಷವನ್ನು ಹೊತ್ತವರು ಆರು ಹೆಜ್ಜೆ ನಡೆದನಂತರ ದಾವೀದನು ಒಂದು ಎತ್ತನ್ನೂ ಕೊಬ್ಬಿದ ಕರುವನ್ನೂ ಯಜ್ಞಮಾಡಿದನು. ದಾವೀದನು ನಾರಿನ ಏಫೋದನ್ನು ಧರಿಸಿಕೊಂಡವನಾಗಿ ಯೆಹೋವನ ಸನ್ನಿಧಿಯಲ್ಲಿ ಪೂರ್ಣಾಸಕ್ತಿಯಿಂದ ಕುಣಿದಾಡಿದನು. ಹೀಗೆ ದಾವೀದನೂ ಎಲ್ಲಾ ಇಸ್ರಾಯೇಲ್ಯರೂ ಆರ್ಭಟಿಸುತ್ತಾ ತುತೂರಿ ಊದುತ್ತಾ ಯೆಹೋವನ ಮಂಜೂಷವನ್ನು ತಂದರು. ಮಂಜೂಷವು ದಾವೀದ ನಗರದೊಳಗೆ ಬರುತ್ತಿರುವಾಗ ಸೌಲನ ಮಗಳಾದ ಮೀಕಲಳು ಕಿಟಕಿಯಿಂದ ಹಣಿಕಿ ನೋಡಿ ದಾವೀದನು ಯೆಹೋವನ ಮುಂದೆ ಜಿಗಿಯುತ್ತಾ ಕುಣಿಯುತ್ತಾ ಇರುವದನ್ನು ಕಂಡು ಮನಸ್ಸಿನಲ್ಲಿ ಅವನನ್ನು ತಿರಸ್ಕರಿಸಿದಳು. ಜನರು ಯೆಹೋವನ ಮಂಜೂಷವನ್ನು ತಂದು ದಾವೀದನು ಹಾಕಿಸಿದ ಗುಡಾರದೊಳಗೆ ನಿಯಮಿತ ಸ್ಥಳದಲ್ಲಿಟ್ಟರು; ಆಗ ದಾವೀದನು ಯೆಹೋವನಿಗೋಸ್ಕರ ಸರ್ವಾಂಗ ಹೋಮಗಳನ್ನೂ ಸಮಾಧಾನಯಜ್ಞಗಳನ್ನೂ ಸಮರ್ಪಿಸಿದನು. ಇದಾದ ಮೇಲೆ ಅವನು ಸೇನಾಧೀಶ್ವರನಾದ ಯೆಹೋವನ ಹೆಸರಿನಿಂದ ಎಲ್ಲರನ್ನೂ ಆಶೀರ್ವದಿಸಿ ಸಭೆಯಾಗಿ ನೆರೆದು ಬಂದಿರುವ ಇಸ್ರಾಯೇಲ್ಯರಲ್ಲಿ ಪ್ರತಿಯೊಬ್ಬ ಗಂಡಸಿಗೂ ಹೆಂಗಸಿಗೂ ಒಂದು ರೊಟ್ಟಿಯನ್ನೂ ಒಂದು ತುಂಡು ಮಾಂಸವನ್ನೂ ದ್ರಾಕ್ಷೇ ಹಣ್ಣಿನ ಉಂಡೆಯನ್ನೂ ಕೊಡಿಸಿದನು. ತರುವಾಯ ಜನರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋದರು. ಅನಂತರ ದಾವೀದನು ತನ್ನ ಮನೆಯವರನ್ನು ಆಶೀರ್ವದಿಸುವದಕ್ಕೆ ಹೋದಾಗ ಸೌಲನ ಮಗಳಾದ ಮೀಕಲಳು ಅವನೆದುರಿಗೆ ಬಂದು ಈ ಹೊತ್ತು ಇಸ್ರಾಯೇಲ್ಯರ ಅರಸನು ಎಂಥ ಗೌರವದಿಂದ ನಡೆದುಕೊಂಡನು! ನೀಚರಲ್ಲೊಬ್ಬನಂತೆ ತನ್ನ ಜನರ ದಾಸಿಯರ ಮುಂದೆ ಬೆತ್ತಲೆಯಾಗಿದ್ದನಲ್ಲಾ ಅಂದಳು. ಆಗ ದಾವೀದನು ಆಕೆಗೆ ಯೆಹೋವನ ಸನ್ನಿಧಿಯಲ್ಲಿಯಷ್ಟೆ; ನಿನ್ನ ತಂದೆಯನ್ನೂ ಅವನ ಮನೆಯವರೆಲ್ಲರನ್ನೂ ಬಿಟ್ಟು ನನ್ನನ್ನೇ ಆರಿಸಿಕೊಂಡು ತನ್ನ ಪ್ರಜೆಗಳಾದ ಇಸ್ರಾಯೇಲ್ಯರ ಅರಸನನ್ನಾಗಿ ಮಾಡಿದ ಯೆಹೋವನ ಮುಂದೆ ಇನ್ನೂ ಕುಣಿದಾಡುವೆನು. ಇದಕ್ಕಿಂತ ಇನ್ನೂ ಹೆಚ್ಚಾಗಿ ತಿರಸ್ಕಾರಹೊಂದುವದಕ್ಕೂ ನನ್ನನ್ನು ಅಲ್ಪನೆಂದು ಭಾವಿಸಿಕೊಳ್ಳುವದಕ್ಕೂ ಸಿದ್ಧನಾಗಿದ್ದೇನೆ. ನೀನು ಹೇಳಿದ ದಾಸಿಯರಾದರೋ ಹೇಗೂ ನನ್ನನ್ನು ಸನ್ಮಾನಿಸುವರು ಅಂದನು. ಸೌಲನ ಮಗಳಾದ ಮೀಕಲಳಿಗೆ ಜೀವದಿಂದಿರುವ ವರೆಗೂ ಮಕ್ಕಳೇ ಆಗಲಿಲ್ಲ”** (2 ಸಮು. 6:12–23).

ದಾವೀದನು ತನ್ನ ದೇವರು ಮಾಡಿದ ಉಪಕಾರವನ್ನು ನೆನಪಿನಲ್ಲಿಟ್ಟು ಸ್ಮರಿಸುತ್ತಾ ಇರುವಂತದ್ದನ್ನು ಇಲ್ಲಿ ನೋಡುತ್ತೇವೆ. ಒಂದು ದಿನ ಒಬ್ಬ ಕೋಟ್ಯಾಧಿಪತಿಯಾದ ವ್ಯಕ್ತಿ ಇದ್ದನು. ಅವನು ತನ್ನ ಕಾರಿನಲ್ಲಿ ಒಂದು ಕಡೆಯಿಂದ ಹೋಗುತ್ತಿದ್ದಾಗ ಕಸದ ತೊಟ್ಟಿಯಿಂದ ಒಂದು ಅಳುವಂತಹ ಮಗುವಿನ ಶಬ್ದ ಕೇಳಿ ಬಂತು ಅವನು ಅಲ್ಲಿಗೆ ಹೋಗಿ ನೋಡಿದಾಗ ಆಶ್ಚರ್ಯ ವಾಯಿತು ಕಸದ ತೊಟ್ಟಿಯಲ್ಲಿ ಒಂದು ಗಂಡು ಮಗುವನ್ನು ಯಾರೋ ಬಿಸಾಕಿ ಹೋಗಿದ್ದಾರೆ. ಮಗುವಿನ ಸುತ್ತಲೂ ಇರುವೆಗಳು ಸುತ್ತಿದ್ದವು, ನಾಯಿಗಳು ಹತ್ತಿರದಲ್ಲೇ ಸುತ್ತಾಡುತ್ತಿದ್ದವು, ಮಗು ಹಸಿವೆಯಿಂದ ಅಳುತ್ತಿತ್ತು. ಈ ದೃಶ್ಯ ನೋಡಿದ ಈ ಧನಿಕನಿಗೆ ಮಗುವಿನ ಮೇಲೆ ಕರುಣೆ ಉಂಟಾಯಿತು. ಈತನಿಗೂ ಮಕ್ಕಳಿರಲಿಲ್ಲ ಆ ಮಗುವನ್ನು ಮನೆಗೆ ತೆಗೆದುಕೊಂಡು ಹೋಗಿ ತನ್ನ ಹೆಂಡತಿಯ ಕೈಗೆಕೊಟ್ಟು ನಡೆದ ಸಂಗತಿಯನ್ನು ವಿವರಿಸಿದನು. ಸುಂದರವಾದ ಗಂಡು ಮಗುವನ್ನು ನೋಡಿ ಹೆಂಡತಿಗೆ ತುಂಬಾ ಸಂತೋಷವಾಯಿತು. ಆ ಮಗುವನ್ನು ತೊಳೆದು ಶುಚಿಗೊಳಿಸಿ ಒಳ್ಳೆ ರೀತಿಯಲ್ಲಿ ಸಾಕಿದರು. ಮಗು ಸ್ಕೂಲಿಗೆ ನಂತರ ಹೈಸ್ಕೂಲ್ ಹಾಗೂ ಕಾಲೇಜಿಗೆ ಹೋಗುವವರೆಗೆ ಬೆಳೆಯಿತು ಆದರೆ ಈ ಬೆಳದಂಥ ಮಗುವಿನ ಅಭ್ಯಾಸವೆಲ್ಲವೂ ಕೆಟ್ಟದಾಗಿತ್ತು. ಕುಡುಕತನ, ವ್ಯಭಿಚಾರ, ಗಲಾಟೆ ಹೀಗೆ ಧನಿಕನ ಮನೆಗೆ ಅನೇಕರು ಪ್ರತಿ ದಿನ ದೂರು ತೆಗೆದುಕೊಂಡು ಬರತೊಡಗಿದರು. ರಾತ್ರಿ ಕೂಡ

> ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ
> (ಫಿಲಿ. 2:4)

ಸರಿಯಾದ ಸಮಯಕ್ಕೆ ಈ ಹುಡುಗನು ಮನೆಗೆ ಬರುತ್ತಿರಲಿಲ್ಲ. ಅನೇಕ ಸಲ ಪೋಲಿಸರ ಅತಿಥಿ ಕೂಡ ಅದ. ಈ ರೀತಿ ಐಶ್ವರ್ಯವಂತನು ಎಷ್ಟೋ ಸಾರಿ ಬುದ್ಧಿ ಹೇಳಿದರೂ ಏನೂ ಪ್ರಯೋಜನವಾಗಲಿಲ್ಲ. ಐಶ್ವರ್ಯವಂತನ ಹಣ ಹಾಳು ಮಾಡುವುದು ಮಾತ್ರವಲ್ಲದೇ ಹೆಸರು ಕೂಡ ಹಾಳಾಯಿತು. ಕೊನೆಗೆ ಒಂದು ದಿನ ತನ್ನ ಸಾಕು ಮಗನನ್ನು ತನ್ನ ಮುಂದೆ ಕೂರಿಸಿ ಒಂದು ಕಸದ ತೊಟಿಯಲ್ಲಿರುವ ಮಗುವಿನ ಫೋಟೋ ತೋರಿಸಿ ಇದು ನೀನು. ನಾನು ಅವತ್ತು ನಿನ್ನನ್ನು ಕಸದ ತೊಟ್ಟಿಯಿಂದ ತರದೇ ಹೋಗಿದ್ದರೆ ಇರುವೆಗಳು ತಿಂದೋ ಅಥವಾ ನಾಯಿಗಳು ತಿಂದೋ ನೀನು ಸತ್ತು ಹೋಗುತ್ತೀದ್ದಿ. ನಿನ್ನನ್ನು ನಾವು ಬೇಕಾದ್ದೆಲ್ಲವನ್ನು ಕೊಟ್ಟು ಬೆಳೆಸಿದ್ದೇವೆ. ನಿನ್ನ ನಿಮಿತ್ತ ಇವತ್ತು ನಮ್ಮ ಮಾನ ಮರ್ಯಾದೆ ಹೋಗುತ್ತಾ ಇದೆ ಎಂದು ವಿವರಿಸಿದನು. ಆಗ ಆ ಹುಡುಗನ ಕಣ್ಣಲ್ಲಿ ನೀರು ಬಂತು ಪಶ್ಚಾತ್ತಾಪ ಉಂಟಾಯಿತು. ತನ್ನ ಸಾಕು ತಂದೆ ತಾಯಿಯ ಬಳಿ ತನ್ನ ಎಲ್ಲಾ ಕೆಟ್ಟ ನಡವಳಿಕೆಗಾಗಿ ಕ್ಷಮೆ ಕೇಳಿದನು. ಅವತ್ತಿನಿಂದ ಅವನ ಜೀವಿತ ಪರಿವರ್ತನೆಯಾಯಿತು. ಒಂದು ದಿನ ಬಂತು ಈ ಹುಡುಗನ ನಿಮಿತ್ತ ತಂದೆ ತಾಯಿಯನ್ನು ಜನರು ಹೊಗಳಲಾರಂಭಿಸಿದರು.

ಪ್ರಿಯರೇ, ಇಂದು ನಮ್ಮ ಪರಿಸ್ಥಿತಿ ಹೇಗಿದೆ ನಮ್ಮ ಜೀವಿತದಲ್ಲಿ ಒಂದೊಂದು ಕ್ಷಣವೂ ಅದ್ಭುತಮಾಡುವ ದೇವರಿಗೆ ನಾವು ಚಿರರುಣಿಯಾಗಿದ್ದೇವಾ? ಆತನ ಉಪಕಾರ ಸ್ಮರಿಸುತ್ತೇವಾ? ನಮ್ಮನ್ನೇ ನಾವು ಪ್ರಶ್ನೆ ಮಾಡಿಕೊಳ್ಳೋಣ.

**ದೇವರನ್ನು ಮರೆಯದಿರಬೇಕಾದರೆ ಏನು ಮಾಡಬೇಕು :**

1) ದೇವರನ್ನು ಯಾವಾಗಲೂ ಸ್ತುತಿಸಬೇಕು.
2) ಅನ್ಯೋನ್ಯತೆಯಲ್ಲಿರಬೇಕು.
3) ಆತನ ವಚನ ಪ್ರಕಾರ ಜೀವಿಸಬೇಕು.
4) ಆತನಿಗೆ ಮಹಿಮೆ ಸಲ್ಲಿಸಬೇಕು.
5) ಆತನ ಉಪಕಾರಗಳ ಕುರಿತು ಯಾವಾಗಲೂ ಮಾತನಾಡಬೇಕು.
6) ಆತನಿಗಾಗಿ ಏನಾದರೂ ಮಾಡಲು ಸಿದ್ಧರಿರಬೇಕು.
7) ಆತನ ಸೇವೆ ಮಾಡಬೇಕು.

ಮುಂದುವರಿಯುವದು........

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

## ವಿಶೇಷ ಪ್ರಾರ್ಥನೆ :

ಪ್ರತಿ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654, 9740985802**

ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ
(ಫಿಲಿ. 2:5).

# ರಸ ಪ್ರಶ್ನೆಗಳು

1. ಭಾರತದಲ್ಲಿ ಪಿನ್‌ಕೋಡ್ ಆರಂಭವಾದ ವರ್ಷ
2. ಜಗತ್ತಿನಲ್ಲಿ ಮೊತ್ತ ಮೊದಲು ಜೈಲು ಆರಂಭವಾದ ದೇಶ
3. 'ಭಾರತ ರತ್ನ' ಪ್ರಶಸ್ತಿ ಜಾರಿಯಾದದ್ದು
4. ಸೈಕಲ್‌ಗಳ ನಗರ ಎಂಬ ಖ್ಯಾತಿ ಇರುವ ನಗರ
5. ಅಮೆರಿಕದ ಡಾಲರ್ ಜಾರಿಗೆ ಬಂದದ್ದು
6. ಭಾರತದಲ್ಲಿ ಟಿ.ವಿ. ಪ್ರಸಾರ ಆರಂಭ
7. ಚಿನ್ನದ ದೊಡ್ಡ ನಿಕ್ಷೇಪವಿರುವ ದೇಶ

**ಉತ್ತರಗಳು :**

1. ಆಗಸ್ಟ್ 15, 1973
2. ಇಂಗ್ಲೆಂಡ್
3. ಜನವರಿ, 12, 1954
4. ಬೀಜಿಂಗ್
5. 1787
6. 1959
7. ದಕ್ಷಿಣ ಆಫ್ರಿಕಾ.

---

**ನವಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಸರಿ ಉತ್ತರಗಳು:**

1. ಲೇಯಳು ಮತ್ತು ರಾಹೇಲಳು.
2. ಮನಸ್ಸೆ ಮತ್ತು ಎಫ್ರಾಯಿಮ್ (ಆದಿ. 41:51–52).
3. ಸಾಫ್ನತ್ಪನ್ನೇಹ (ಆದಿ. 41:45).
4. ಗುರುಪೀಠದ (ಓನ್ ಪಟ್ಟಣದ) ಆಚಾರ್ಯನಾಗಿದ್ದ ಪೋಟೀಫೆರನ ಮಗಳು (ಆದಿ. 41:45).
5. ನೊವೊಮಿಯ ಗಂಡನಾದ ಎಲೀಮೆಲೆಕನ ಗೋತ್ರದವನು (ರೂತ. 2:1).
6. ರಮಣೀಯಳು (ರೂತ. 1:20).
7. ಯೆಹೂದ ದೇಶಕ್ಕೆ ಸೇರಿದ ಎಫ್ರಾತ (ರೂತ. 1:2).
8. ಎಲೀಮೆಲೆಕನು (ರೂತ. 1:2).
9. ಮಹ್ಲೋನ್, ಕಿಲ್ಯೋನ್ (ರೂತ. 1:2).
10. ಒರ್ಫಾ (ರೂತ. 1:4).

---


## ಬೇಕಾಗಿದ್ದಾರೆ

ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ

**Administrator & Accountant**

ಬೇಕಾಗಿದ್ದಾರೆ. ಒಳ್ಳೆಯ ಸಂಭಾವನೆ ಹಾಗೂ ವಸತಿ ಸೌಕರ್ಯ

ಒದಗಿಸಲಾಗುವುದು.


ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ
(2 ಕೊರಿ. 12:10).